ಲಾದ ಮೊಬಲಗು ಮೊತ್ತ ಜಮಾ ಲೆಖ್ಖಕ್ಕೆ ಸೇರಿಸಿಕೊಳ್ಳಪಡುವುದು ವಸೂಲಾಗದೆ ಇರುವ ಮೊಬಲಗು ಲೆಖ್ಖಕ್ಕೆ ಜಮಾ ಆಗುವುದಿಲ್ಲ ~~ಕಾರ್ಯನಿರ್ವಾಹಕರಿಗಾಗಿ ತಗಲುವ ಖರ್ಚನ್ನೂ ಮತ್ತು~~ ಡಿಪಾಜಿಟ್ಟಿಗೂ ~~ಇತರ ಸಾಲಗಾರರಿಗೂ~~ ಕೊಡತಕ್ಕ ಬಡ್ಡಿಯನ್ನು ಮೊದಲು ಕಟಾಯಿಸತಕ್ಕದ್ದು ಉಳಿದ ನಫೆ ಪೈಕಿ ಹೊರಗಿನಿಂದ ತಂದ ಸಾಲದಮೇಲಿನ ~~ಮತ್ತು ಡಿಪಾಜಿಟ್ಟಿನ~~ ಪೂರಾ ಲಾಭವನ್ನೂ ಮತ್ತು ~~ಷೇರು ಮೊಬಲಗಿನಿಂದ ಬಂದ~~ ಲಾಭದ ಪೈಕಿ ಶೇಕಡ 25ಕ್ಕೆ ಕಮ್ಮಿ ಇಲ್ಲದಷ್ಟನ್ನೂ ರಿಜರ್ವ್ ಫಂಡಿಗ ಸೇರಿಸತಕ್ಕದ್ದು ಇದ ಹೊರತಾ ಉಳಿದ ಮೊಬಲಗಿನಲ್ಲಿ ಶೇಕಡಾ 5ಕ್ಕೆ ಹೆಚ್ಚು ಇಲ್ಲದಂತೆ ಅನ್ಯೋನ್ಯಸಹಾಯ ಸಂಘಗಳ ಅಭಿವೃದ್ಧಿಗೆ ~~ತಮ್ಮ ತಾಲ್ಲೂಕಿನಲ್ಲಿ ಏರ್ಪಡಿಸಬಹುದಾದ [illegible] ಖರ್ಚುಗಳಿಗೂ, ನಡೆಸಬಹುದಾದ~~ ಕಾನ್ಫರೆನ್ಸ್ ಖರ್ಚಿಗೂ ~~ಮತ್ತು ಇತರ ತಮ್ಮ ಗ್ರಾಮಗಳ ಪುರೋಭಿವೃದ್ಧಿಯ ಖರ್ಚಿಗೂ~~ ಬಂದು ಫಂಡಾಗಿ ನಿಷ್ಕರ್ಷಿಸತಕ್ಕದ್ದು ಉಳಿದದ್ದರಲ್ಲಿ ವರುಷಕ್ಕೆ ಶೇಕಡಾ ~~[illegible]~~ ಹೆಚ್ಚಿಲ್ಲದಂತೆ ವಸೂಲಾದ ಷೇರು ಮೊಬಲಗಿನ ಮೇಲೆ ನಫೆಯು ಹಂಚಲ್ಪಡತಕ್ಕದ್ದು ಉಳಿದ ಮೊಬಲಗನ್ನು ರಿಜರ್ವ್ ಫಂಡಿಗಾಗಲೀ ಡಿವಿಡೆಂಡ್ ಈಕ್ವಲೈಜೇಷನ್ ಫಂಡಿಗಾಗಲಿ ಅಥವಾ ಮೆಂಬರುಗಳಿಂದ ಬಂದ ಬಡ್ಡಿ ಮೇಲಿನ ರಿಬೇಟ್ ಆಗಲಿ ಅಥವಾ ಅವರು ಸೊಸೈಟಿಯಲ್ಲಿ ಕೊಂಡು ಕೊಂಡ ವ್ಯಾಪಾರದ ಬೆಲೆಯ ಮೇಲಿನ ರಿಬೇಟ್ ಆಗಿಯಾಗಲಿ ಹಂಚತಕ್ಕದ್ದು

[illegible handwritten marginal note]

44 ~~49~~ ಕೋಆಪರೇಟಿವ್ ಮತ್ತು ಧರ್ಮದ ಫಂಡು — ಪ್ರತಿ ಸಂವತ್ಸರದಲ್ಲಿಯೂ ರಿಜಿಸ್ಟ್ರಾರವರ ಅಪ್ಪಣೆ ಪಡೆದು ಕೋಆಪರೇಟಿವ್ ಮತ್ತು ಧರ್ಮದ ಫಂಡಿನ ಕೆಲವು ಮೊಬಲಗನ್ನು ಉಪಯೋಗಿಸಲು ಪಂಚಾಯಿತರಿಗೆ ಅಧಿಕಾರವಿರುತ್ತೆ

45 ~~50~~ ರಿಜರ್ವ್ ಫಂಡು — ನಫೆಯಲ್ಲಿ ಆಗಿಂದಾಗ್ಯೆ ಸೊಸೈಟಿಯವರು ಪ್ರತ್ಯೇಕವಾಗಿ ಇಡತಕ್ಕ ಆಪದ್ಧನವು ರಿಜರ್ವ್ ಫಂಡ್ ಎನಿಸುವುದು ಈ ರಿಜರ್ವ್ ಫಂಡನ್ನು ಸರ್ಕಾರಿ ಅಥವಾ ಪೋಸ್ಟ್ ಆಫೀಸಿನ ಸೇವಿಂಗ್ಸ್ ಬ್ಯಾಂಕುಗಳಲ್ಲಾಗಲಿ ಅಥವಾ ಸೊಸೈಟಿಯು ಮೆಂಬರಾಗಿ ಸೇರಿರುವ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕುಗಳಲ್ಲಾಗಲಿ ರಿಜಿಸ್ಟ್ರಾರವರ ಅನುಮತಿಯಂತೆ ಡಿಪಾಜಿಟ್ಟು ಮಾಡತಕ್ಕ

46 ~~51~~ ವಸೂಲಿ ಕ್ರಮ ಮುಂತಾದ್ದು ನಡಿಸಿ ಯಾವ ವಿಧದಿಂದಲೂ ವಸೂಲಿಗೆ ರಹ ಇಲ್ಲದ ಸಾಲಗಳಿಂದ ಆ ಸಾಲಿನ ನಷ್ಟವು ಲಾಭಕ್ಕಿಂತ ಜಾಸ್ತಿಯಾದಲ್ಲಿ ರಿಜಿಸ್ಟ್ರಾರವರ ಅಪ್ಪಣೆ ಪಡೆದು ಅಂಥಾ ನಷ್ಟವನ್ನು ರಿಜರ್ವಿನಿಂದ ಸಂಘದ ಜವಾಬ್ದಾರೀಗೆ ಸಮನಾಗುವಷ್ಟು

ಭರ್ತಿ ಮಾಡಿಕೊಳ್ಳಬಹುದು ಆದರೆ ಯಾವ ಸಾಲವನ್ನೂ ಸರಿಯಾದ ತನಿಖೆ ಮತ್ತು ಸಂಪೂರ್ಣವಾದ ವಸೂಲಿ ಕ್ರಮ ಜರುಗಿಸದೆ ವಜಾ ಮಾಡಕೂಡದು

47 ~~52~~ ರಿಜರ್ವ್ ಫಂಡು ಮೂಲಗು ಮೆಂಬರುಗಳಲ್ಲಿ ಯಾವಾಗಲೂ ಭಾಗಿಸಲ್ಪಡುವುದಿಲ್ಲ ಸೊಸೈಟಿ ಮುಂದಕ್ಕೆ, ಆದರೆ ನ್ಯಾಯವಾದ ಎಲ್ಲಾ ಖರ್ಚನ್ನೂ ರಿಜರ್ವ್ ಫಂಡಿನಿಂದಾ ವಜಾ ಹಾಕಿ ಉಳಿದದ್ದು ಹೆಚ್ಚು ಮೆಂಬರುಗಳೂ ಮತ್ತು ರಿಜಿಸ್ಟ್ರಾರವರೂ ಒಪ್ಪಿದ ಧರ್ಮ ಕೆಲಸಕ್ಕೆ ಉಪಯೋಗಿಸಲ್ಪಡುವದು

48 ~~53~~ ಈ ಸಂಘಕ್ಕೂ ಇದರ ಮೆಂಬರುಗಳಿಗೂ ಡಿಪಾಜಿಟ್ಟುದಾರರಿಗೂ, ಇತರ ಸಂಘಗಳಿಗೂ ಪರಜನರಿಗೂ ಸೇರಿ ನಡೆಯುವ ಆಳಿತಗಳ ವಿಷಯವಾಗಿಯೂ, ಲೇವಾದೇವಿಗಳ ವಿಷಯವಾಗಿಯೂ ಉಂಟಾಗಬಹುದಾದ ದಾವೆ, ವಿವಾದ ಮುಂತಾದ ವ್ಯಾಜ್ಯಗಳು ರಿಜಿಸ್ಟ್ರಾರವರಲ್ಲಿ ದಾಖಲಾಗತಕ್ಕದ್ದು ಅವರ ತೀರ್ಪುಗಳನ್ನೂ ಡಿಕ್ರಿಗಳನ್ನೂ ಡೆಪ್ಯುಟಿ ಕಮಿಷನರುಗಳು ಕಂದಾಯದ ಬಾಕಿಯಂತೆ ಸಾಲಗಳು ವಸೂಲ್‌ಮಾಡಿ ಜಾರಿಮಾಡಬಹುದು ~~ರಿಜಿಸ್ಟ್ರಾರವರ ಆರ್ಡರ್ ವಾ ಡಿಕ್ರಿಯ ಮೇಲೆ ಗವರ್ನಮೆಂಟಿಗೆ ಆರ್ಡರ್ ವಾ ಡಿಕ್ರಿಯ ತಾರೀಖಿನ ಒಂದು ತಿಂಗಳೊಳಗೆ ಅಪೀಲು ಮಾಡಬ~~ಹುದು ಈ ದಾವೆ ವಿವಾದ, ವ್ಯಾಜ್ಯ ಮತ್ತು ಅವುಗಳ ಅಪೀಲು ವಿಷಯಗಳಲ್ಲಿ ಸಿವಿಲ್ ಕೋರ್ಟುಗಳಿಗೆ ವಿಚಾರಿಸುವ ಮತ್ತು ತೀರ್ಮಾನಮಾಡುವ ಅಧಿಕಾರವಿರುವದಿಲ್ಲ

ದಾವೆ ವಿವಾದ ಮುಂತಾದ ವ್ಯಾಜ್ಯಗಳ

49 ~~54~~ ರಿಜಿಸ್ಟ್ರಾರವರ ಅಪ್ಪಣೆ ಪಡೆದು ಈ ಸೊಸೈಟಿಯು ಸೆಂಟ್ರಲ್ ಪ್ರಾವಿನ್ಷಿಯಲ್ ಮತ್ತು ~~ಸೆಂಟ್ರಲ್~~ ಕೋಆಪರೆಟಿವ್ ಬ್ಯಾಂಕುಗಳಲ್ಲಿ ಒಂದೊಂದು ಷೇರನ್ನಾದರೂ ಪಡೆಯಬೇಕು

ಷೇರ್ ಖರೀದಿ

50 ~~55~~ ರಿಜಿಸ್ಟ್ರಾರವರು ವಿಧಿಸುವ ನಮೂನೆಗಳಲ್ಲಿ ಸೊಸೈಟಿಯ ಲೆಖ್ಖಗಳನ್ನು ಇಡತಕ್ಕದ್ದು ಕಮಿಟಿ ಯಿತರ ಮತ್ತು ಜನರಲ್ ಮೀಟಿಂಗ್ ನಡವಳಿಕೆಗಳ ಕಾಪಿಗಳನ್ನು ಮತ್ತು ರಿಜಿಸ್ಟ್ರಾರವರು ಅಪೇಕ್ಷಿಸುವ ಮಾಹೆವಾರಿ ವಗೈರೆ ಲೆಖ್ಖಗಳ ಕಾಪಿಗಳನ್ನು ಅವರು ವಿಧಿಸುವ ಕಾಲಕ್ಕೆ ಸರಿಯಾಗಿ ಕಳುಹಿಸುತ್ತಾ ಬರಬೇಕು

ಲೆಖ್ಖ ಪತ್ರಗಳು

51 ~~56~~ ಮೇಲ್ಕಂಡ ಬೈಲಾಗಳು 1918 ~~1904~~ನೇ ಇಸವಿ VII ~~III~~ನೇ ನಂಬರ್ ಕೋಆಪರೇಟಿವ್ ಸೊಸೈಟಿಗಳ ಕಾನೂನು ಮತ್ತು ಕೋಆಪರೇಟಿವ್ ರೂಲ್ಸಿಗೆ ಅನುಸಾರವಾಗಿ ಮಾಡಲ್ಪಟ್ಟಿರುತ್ತವೆ ಕಾಲಕ್ರಮೇಣ ಈ ಬೈಲಾಗಳಲ್ಲಿ ಬದಲಾವಣೆ

ಬೈಲಾ ಬದಲಾವಣೆ

ಣೆಗಳು ಮಾಡಲು ಯುಕ್ತ ತೋರಿಬಂದಲ್ಲಿ ಮೇಲ್ಕಂಡ ಕಾನೂನಿಗೂ ಮತ್ತು ರೂಲ್ಸಿಗೂ ವಿರೋಧವಿಲ್ಲವಂತೆ ರಿಜಿಸ್ಟ್ರಾರವರ ಅನುಮತಿ ಪಡೆದು ಬದಲಾವಣೆ ಮಾಡತಕ್ಕದ್ದು

ಅಧಿಕಾರದಾರರುಗಳ ದಸ್ಕತ್ತುಗಳು

1

2

3

4

5

6

7

8

9

10

11

12

13

14

15

APPROVED

DATED CAMP –

2 11 192[illegible]

Asst Registrar of Co operative Societies
~~in Mysore~~

Asst Registrar of Co operative Societies

R. O. S 27B

ತಾರೀಖು [illegible]

ರಿಜಿಸ್ಟರಾದ ನಂಬರು [illegible]

[illegible]

[illegible]

ಲಿಮಿಟೆಡ್ ಕೋ ಆಪರೇಟಿವ್ ಸೊಸೈಟಿ
ಯಾನೆ ಮಿತವಿಲ್ಲದ ಜವಾಬ್ದಾರಿಯುಳ್ಳ
ಪರಸ್ಪರ ಸಹಾಯ ಸಂಘದ
ಬೈಲಾಗಳು.

W D [illegible]—GPB—[illegible]

[illegible]

ರಿಜಿಸ್ಟರಾದ ನಂಬರು ೩೨೬ [illegible]

[illegible]

[illegible] ತಾಲ್ಲೂಕು

[illegible]

ಅನ್‌ಲಿಮಿಟೆಡ್ ಕೋ ಆಪರೇಟಿವ್ ಸೊಸೈಟಿ ಯಾನೆ ಮಿತವಿಲ್ಲದ ಜವಾಬ್ದಾರಿಯುಳ್ಳ ಪರಸ್ಪರ ಸಹಾಯ ಸಂಘದ ಬೈಲಾಗಳು

1 ಈ ಸೊಸೈಟಿಗೆ [illegible]

ಹೆಸರು [illegible]

ಅನ್‌ಲಿಮಿಟೆಡ್ ಕೋ ಆಪರೇಟೀವ್ ಸೊಸೈಟಿ ಯಾನೆ ಮಿತವಿಲ್ಲದ ಜವಾಬ್ದಾರಿಯುಳ್ಳ ಪರಸ್ಪರ ಸಹಾಯ ಸಂಘ ಎಂದು ಹೆಸರು

2. ಇದರ ವಿಳಾಸ [illegible]

ತಾಲ್ಲೂಕು [illegible]

ವಿಳಾಸ ಗ್ರಾಮ [illegible]

ಪೋಷ್ಟಾಫೀಸು [illegible]

3 ಈ ಸೊಸೈಟಿಯ ಆಡಳಿತವು ಈ ಕೆಳಗೆ ನಮೂದಿಸಿರುವ ಗ್ರಾಮಗಳಿಗೆ ಮಾತ್ರ ವ್ಯಾಪಿಸಿರತಕ್ಕದ್ದು

ಆಡಳಿತ

[illegible]

4 ಈ ಸೊಸೈಟಿಯ ಉದ್ದೇಶಗಳು ಏನೆಂದರೆ —

ಉದ್ದೇಶ

(i) ಮೆಂಬರುಗಳಲ್ಲಿ ತಮ್ಮ ಆದಾಯದ ಶಕ್ತಿ ಸ್ವಲ್ಪ ಉಳಿಸುವದನ್ನೂ ಮತ್ತು ಮಿತವ್ಯಯ ಬುದ್ಧಿಯನ್ನೂ ಅನ್ಯೋನ್ಯ ಸಹಾಯ ಗುಣವನ್ನೂ ಅಭಿವೃದ್ಧಿಗೊಳಿಸುವುದು

(ii) ಬಂಡವಾಳವನ್ನು ಕೂಡಿಸಿಕೊಂಡು ಮೆಂಬರುಗಳಿಗೆ ಪ್ರಯೋಜನವಾದ ಉದ್ದೇಶಗಳಿಗೆ ಸಾಲ ಕೊಡುವುದು

(iii) ಬೀಜ, ಗೊಬ್ಬರ, ನೇಗಿಲು ಮುಂತಾದ ವ್ಯವಸಾಯದ ಸಾಮಗ್ರಿಗಳನ್ನೂ, ಆಹಾರ ಪದಾರ್ಥಗಳನ್ನೂ ಮತ್ತು ಅವಳ ಬಗ್ಗೆ ಉಪಯೋಗವಾಗುವ ಪದಾರ್ಥ

[illegible]

ಗಳನ್ನೂ ಕೊಂಡು ಚಿಲ್ಲರೆ ಬಿಕರಿ ಮಾಡುವುದು (ಲೇವಾದೇವಿಯಲ್ಲಿ ಕೊಂಚಕಾಲ ಅನುಭವ ಹೊಂದಿದ ನಂತರ ರಿಜಿಸ್ಟ್ರಾರವರ ಅನುಮತಿಯನ್ನು ಪಡೆದು ಈ ಕೆಲಸಕ್ಕೆ ಪ್ರವರ್ತಿಸಬೇಕು)

v ~~(ಜ)~~ ರಿಜಿಸ್ಟ್ರಾರವರ ಅನುಮತಿಯಿಂದ ಸೊಸೈಟಿಯವರು ತೀರ್ಮಾನಿಸಬಹುದಾದ ಇತರ ಉದ್ದೇಶ್ಯಗಳು

5 ಸೊಸೈಟಿಗೆ ಹೊರಗಿನಿಂದ ತರತಕ್ಕ ಸಾಲಗಳಿಗೂ, ಡಿಪಾಜಿಟ್ಟುಗಳಿಗೂ ~~ಮೆಂಬರುಗಳೆಲ್ಲರೂ ಜಾಯಿಂಟಾಗಿಯೂ ಮತ್ತು ಬೇರೆ ಬೇರೆಯಾಗಿಯೂ ಸಹಾ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ~~ ಜವಾಬ್ದಾರ [illegible]

6 ಈ ಸೊಸೈಟಿಯಲ್ಲಿ 5/ [illegible]

ಷೇರುಗಳು ರೂಪಾಯಿನ 1000

ಷೇರುಗಳಿರತಕ್ಕದ್ದು

7 ಹದಿನೆಂಟು ವರುಷಕ್ಕೆ ಮೇಲ್ಪಟ್ಟ 3ನೆ ಬೈಲಾ ಮೆಂಬರಾಗುವ ದಲ್ಲಿ ~~ಕಂಡಗ್ರಾಮ ಅಥವಾ ಗ್ರಾಮ~~ ಬಗೆ ~~ಗಳಲ್ಲಿ ವಾಸವಾಗಿರುವವರು~~ ಮಾತ್ರ ಯೋಗ್ಯರಾದ ಪಕ್ಷದಲ್ಲಿ ಸೊಸೈಟಿಗೆ ಮೆಂಬರಾಗಲು ಅರ್ಹರಾಗಿರುತ್ತಾರೆ (ಮೆಂಬರುತನಕ್ಕೆ ಬರುವ ದರಖಾಸ್ತುಗಳನ್ನು ಮಂಜೂರು ಮಾಡುವುದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಪಂಚಾಯಿತದಾರರು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತಾರೆ

8 (1) ರಿಜಿಸ್ಟ್ರೇಷನ್‌ಗೋಸ್ಕರ ದರಖಾಸ್ತಿಗೆ ರುಜು ಮಾಡುವವರು ಬೈಲಾ ಪ್ರಕಾರ ಪ್ರವೇಶಧನ, ಷೇರು ಫೀ ಮತ್ತು ಷೇರು ಮೊಬಲಗು ಕೊಟ್ಟನಂತರ ಈ ಬೈಲಾಗಳಿಗೆ ಒಳಪಟ್ಟು ಮೆಂಬರಾಗುತ್ತಾರೆ

(2) ಈ ಬೈಲಾಗಳನ್ನನುಸರಿಸಿ ~~[illegible]~~ದಾಗ್ಯೆ (1) ಮೆಂಬರಾಗಿ ಸೇರಿಸಲ್ಪಡುವಂಥವರೂ ಮೆಂಬರಾಗುತ್ತಾರೆ ಹೀಗೆ ಮೆಂಬರಾಗಲು ಅಪೇಕ್ಷಿಸುವ ಪ್ರತಿ ಒಬ್ಬ ಮನುಷ್ಯನೂ ಪಂಚಾಯಿತರು ವಿಧಿಸುವ ನಮೂನೆಯಲ್ಲಿ ಮೆಂಬರುತನಕ್ಕೆ ದರಖಾಸ್ತನ್ನೂ, ಮೆಂಬರಾಗಲು ೪ ಆಣೆ ಪ್ರವೇಶಧನವನ್ನನ್ನೂ ಮತ್ತು ದರಖಾಸ್ತಿನಲ್ಲಿ ನಮೂದಿಸುವ ಷೇರುಗಳಿಗೆ ಷೇರು ಒಂದಕ್ಕೆ 0-1-0 ಆಣೆಯಂತೆ ಆಗುವ ಷೇರು ಫೀಯನ್ನೂ ಮತ್ತು ಷೇರು ಒಂದಕ್ಕೆ [illegible] — ಗೆ ಕಮ್ಮಿ ಇಲ್ಲದಂತೆ ಮೊದಲನೆ ಕಂತಿನ ಹಣದೊಂದಿಗೆ, ಸೆಕ್ರೆಟರಿಯವರಲ್ಲಿ ದಾಖಲ್ಮಾಡತಕ್ಕದ್ದು ದರಖಾಸ್ತು

[illegible]

[illegible]

[illegible]

ಮಂಜೂರಾಗದಿದ್ದರೆ ದರಖಾಸ್ತಿನೊಂದಿಗೆ ಕೊಡಲ್ಪಟ್ಟ ಹಣವೆಲ್ಲಾ ವಾಪಸ ಮಾಡಲ್ಪಡುವುದು ದರಖಾಸ್ತು ಮಂಜೂರಾದಲ್ಲಿ ಮೆಂಬರುತನದ ರಿಜಿಸ್ಟರಿಗೆ ದಾಖಲಾಗಿ ಮೆಂಬರಾಗುವನು

9 ಪ್ರತಿ ಒಬ್ಬ ಮೆಂಬರೂ ಕನಿಷ್ಠ ಪಕ್ಷ ಒಂದು ಷೇರನ್ನಾದರೂ ತೆಗೆದುಕೊಳ್ಳಬೇಕು ಪ್ರತ್ಯೇಕ

ಮೆಂಬರಿನ ಕರ್ತವ್ಯ

ಷೇರುಗಳಿಗಿಂತ ಜಾಸ್ತಿಯಾಗಿ ಯಾರಿಗೂ ಕೊಡಕೂಡದು, ಷೇರು ಧನಕ್ಕಾಗಿ ಪ್ರತಿ ಒಂದು ತಿಂಗಳಲ್ಲಿಯೂ ಹದಿನೈದನೆ ತಾರೀಖಿನೊಳಗಾಗಿ ಷೇರು ಒಂದಕ್ಕೆ । ೯-೦ ಗೆ ಕಮ್ಮಿ ಇಲ್ಲದಂತೆ ಕೊಡುತ್ತಾ ಬರಬೇಕು ಷೇರು ಮೊಬಲಗು ಪೂರ್ತಿಯಾಗಿ ಆಗಲಿ ಅಥವಾ ಕೆಲವು ಕಂತುಗಳು ಮುಂಗಡವಾಗಿಯಾಗಲಿ ಮೊದಲೇ ಕೊಡಬಹುದು ಹೀಗೆ ಪ್ರತಿ ಮಾಹೆಯಲ್ಲಿಯೂ ಕೊಡುವ ಮೊಬಲಗು ಒಟ್ಟಿನಲ್ಲಿ ೨ ೦-೦ ರೂಪಾಯಿ ಆದ ಒಡನೆಯೆ ಹಾಗೆ ಒಟ್ಟಾದ ಪ್ರತಿ ೯೧ ರೂಪಾಯಿಗಳಿಗೂ ಒಂದು ಷೇರು ಪೂರ್ತಿಯಾಯಿತೆಂದು ಭಾವಿಸತಕ್ಕದ್ದು ಷೇರು ಕಂತುಗಳು ಸಕಾಲಕ್ಕೆ ಬರದಿದ್ದರೆ ಹೀಗೆ ನಿಂತ ಕಂತುಗಳಿಗೆ ಪಂಚಾಯಿತರಿಗೆ ಸೂಕ್ತತೋರಿದಂತೆ ಸುಸ್ತಿ ಬಡ್ಡಿಯನ್ನು ವಿಧಿಸಬಹುದು ಆದರೆ ಮೂರು ತಿಂಗಳಿಗಿಂತ ಹೆಚ್ಚಾಗಿ ಷೇರು ಕಂತುಗಳನ್ನು ಯಾವ ಮೆಂಬರೇ ಆಗಲಿ ನಿಲ್ಲಿಸಿಕೊಂಡಲ್ಲಿ ಆ ಷೇರುಗಳನ್ನು ಆ ಮೆಂಬರಿನ ಹೆಸರಿನಿಂದ ವಜಾಮಾಡಿ ಇತರರಿಗೆ ವಿಲೆ ಮಾಡಲಿಕ್ಕೆ ಪಂಚಾಯಿತರಿಗೆ ಸಂಪೂರ್ಣಾಧಿಕಾರವಿರುತ್ತೆ ಷೇರುಗಳ ಮೇಲೆ ವಸೂಲಾದ ಸುಸ್ತಿ ಬಡ್ಡಿಯನ್ನು ರಿಜರ್ವ ಫಂಡಿಗೆ ಸೇರಿಸತಕ್ಕದ್ದು

10 ಪ್ರತಿ ಮೆಂಬರು ತನ್ನ ಸ್ವಾಧೀನಾನುಭವದಲ್ಲಿರುವ ಸ್ಥಿರಸ್ವತ್ತಿನ ಪಟ್ಟಿಯನ್ನು ಸೊಸೈಟಿಗೆ ಕೊಡಬೇಕು. ಇದರ ತಪ್ಸೀಲುಗಳು ಆಸ್ತಿ ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಡುತ್ತೆ ಮತ್ತು ಆಧಾರ, ಭೋಗ್ಯ, ಕ್ರಯ ಮುಂತಾದ ರೂಪದಲ್ಲಿ ಮೇಲ್ಕಂಡ ರಿಜಿಸ್ಟರಿನಲ್ಲಿ ನಮೂದಾದ ಸ್ವತ್ತಿನ ಮೇಲೆ ಇತರರಿಗೆ ಯಾವ ವಿಧವಾದ ಹಕ್ಕನ್ನುಂಟುಮಾಡಿದಲ್ಲಿ ಸದರಿ ಮೆಂಬರು ಆ ಕೂಡ್ಲೆ ಪಂಚಾಯಿತರ ಗಮನಕ್ಕೆ ತರಬೇಕು ಮತ್ತು ಆಸ್ತಿ ರಿಜಿಸ್ಟರಿನಲ್ಲಿ ಷರಾ ಬರಿಸಬೇಕು

11 ಸೊಸೈಟಿಯಲ್ಲಿರತಕ್ಕ ಹಕ್ಕು ಬಾಧ್ಯತೆಯನ್ನು

ಮೆಂಬರುತನದ ಹಕ್ಕು

ಯಾವ ಮೆಂಬರೇ ಆಗಲಿ ಇತರರಿಗೆ ಮಾರಾಯಿಸಲು ಅಧಿಕಾರ ಹೊಂದಿರುವುದಿಲ್ಲ.

10 ~~12~~ ತಾನು ಸೇರಿದ ಮೂರು ವರುಷಗಳ ವರೆಗೂ

ಮೆಂಬರುತನ ತ್ಯಜಿಸುವಿಕೆ

ಮೆಂಬರು ತನವನ್ನು ಬಿಡಲು ಯಾವ ಮೆಂಬರಿಗೂ ಅಧಿಕಾರವಿರುವುದಿಲ್ಲ. ಹಾಗೆ ಬಿಡುವುದಕ್ಕೆ ಮೊದಲೇ ತನ್ನ ಸ್ವಂತ ಸಾಲ

ಗಳನ್ನೂ ಮತ್ತು ತನ್ನ ಜಮೀನು ಮೇಲೆ ಇತರರಿಗೆ ಕೊಡಬೇಕಾಗಿರುವ ಸಾಲಗಳನ್ನೂ ಸಹಾ ಸೊಸೈಟಿಗೆ ಸಲ್ಲಿಸಿ ಲಿಖಿತ ಮೂಲಕ ಪಂಚಾಯಿತರಿಗೆ ತಿಳಿಸಬೇಕು

11 ~~13~~ ಪಂಚಾಯಿತರು ಈ ಕೆಳಗೆ ನಮೂದಿಸುವ ಕಾರಣಗಳಿಗಾಗಿ ಮೆಂಬರನ್ನು ವಜಾ ಮಾಡಬಹುದು —

(1) ಸಾಲ ತೀರಿಸದೆ ಹೋಗುವುದು

(2) ಸಾಲದ ವಾಯಿದೆ ಮೀರಿ ಹೆಚ್ಚು ವಾಯಿದೆ ಪಡೆಯದೆ ಇರುವುದು

(3) ಸಾಲಪಡೆದ ಉದ್ದೇಶಕ್ಕೆ ಅಲ್ಲದೆ ಬೇರೆ ಕೆಲಸಕ್ಕೆ ಸಾಲದ ಮೊಬಲಗನ್ನು ಉಪಯೋಗಿಸಿ ಕೊಳ್ಳುವುದು

(4) ಹುಚ್ಚನಾಗುವುದು, ದಿವಾಳಿಯಾಗುವುದು ಸೊಸೈಟಿಗೆ ಅಗೌರವವಾದ ರೀತಿಯಲ್ಲಿ ನಡೆದು ಕೊಳ್ಳುವುದು ಮತ್ತು ಪಂಚಾಯಿತರಿಗೆ ತೋರಿ ಬರುವ ಇತರ ದುರ್ನಡತೆಗಳು

12 ~~14~~ (1) ಫವತಿ ಆದರೆ ಮೆಂಬರುತನವು ತಪ್ಪಿ ಹೋಗುವುದು

~~(2) ಈ ಸೊಸೈಟಿಯ ಆಡಳಿತಕ್ಕೆ ಸೇರಿದ 3ನೆ ಬೈಲಾದಲ್ಲಿ ಕಂಡ ಗ್ರಾಮಗಳ ವಾಸವನ್ನು ಖಾಯಂ ಆಗಿ ಬಿಟ್ಟು ಹೋದ ಮೆಂಬರನ್ನು ಪಂಚಾಯಿತರು ವಜಾ ಮಾಡತಕ್ಕದ್ದು~~

13 ~~15~~ (a) ಮೆಂಬರುತನ ತಪ್ಪಿಹೋದವನ ವಿಷಯದಲ್ಲಿ 5ನೆಯ ರೂಲಿನಲ್ಲಿ ಕಂಡ ಜವಾಬ್ದಾರಿ [illegible] ಬಿಟ್ಟು ಹೋದ ಮೆಂಬರಿನ ಜವಾಬ್ದಾರಿ ಜವಾಬ್ದಾರಿಯು ಮೆಂಬರುತನ ತಪ್ಪಿಹೋದ ತಾರೀಖಿನಿಂದ ಲಾಗಾಯಿತು 24 ~~18~~ ತಿಂಗಳವರಿಗೆ ಇರುತ್ತೆ

(b) ಹಾಗೆಯೇ ಫವತಿಪಟ್ಟವನ ಆಸ್ತಿ ವಿಷಯದಲ್ಲಿಯೂ ಸಹ ಮೇಲ್ಕಂಡ ಜವಾಬ್ದಾರಿಯು ಫವತಿ ತಾರೀಖು ಲಾಗಾಯಿತು 12 ~~18~~ ತಿಂಗಳವರಿಗೆ ಇರುತ್ತೆ

14 ~~16~~ ಮೆಂಬರುತನ ತಪ್ಪಿಹೋದವರಿಂದ ಬರಬೇಕಾದ ಸಾಲವನ್ನು ವಾಯಿದೆ ಲಕ್ಷ್ಯ ಮೆಂಬರು ತನ ತಪ್ಪಿದವನ ಆಡಳಿತ ವಿಲ್ಲದೆ ಪಂಚಾಯಿತರು ತಕ್ಷಣ ಬರಮಾಡಿಕೊಳ್ಳಬೇಕು ಮೆಂಬರುತನ ತಪ್ಪಿದಾಗ ನಿಷ್ಕರ್ಷಿಸಲ್ಪಡದ ಲಾಭಕ್ಕೆ ಆತನು ಬಾಧ್ಯನಾಗುವದಿಲ್ಲ

15 ~~17~~ ಫೌತಿಯಾದರೂ, ಮೆಂಬರುತನ ತಪ್ಪಿಹೋದರೂ, ಆ ಮೆಂಬರಿನ ಲೆಕ್ಕವನ್ನು ಒಂದು ತಿಂಗಳೊಳಗಾಗಿ ಪಂಚಾಯಿತರು ಖೈದು ಮಾಡತಕ್ಕದ್ದು ಅವ

ಸಿಗೆ ಹಣ ಸಲ್ಲಬೇಕಾದ ಪಕ್ಷದಲ್ಲಿ ಆ ಮೊಬಲಗನ್ನು ಸೊಸೈಟಿಯಲ್ಲಿ ಅವನ ಹೆಸರಿನಲ್ಲಿ ಚಾಲ್ತಿ ಡಿಪಾಜಿಟ್ಟಿಗೆ ಇಟ್ಟುಕೊಂಡು, ಅವನಿಗಾಗಲಿ, ಅವನ ವಾರಸದಾರರಿಗಾಗಲಿ, ನಾಮಿನಿಗಾಗಲಿ ನೋಟೀಸು ಕೊಟ್ಟು ಪಾವತಿಮಾಡತಕ್ಕದ್ದು ಅವನಿಂದ ಸೊಸೈಟಿಗೆ ಹಣ ಸಲ್ಲಬೇಕಾದ ಪಕ್ಷದಲ್ಲಿ ಬಾಕಿಯಾಗುವ ಮೊಬಲಗ್ಗೆ ಒಂದು ವಾಯಿದೆಯಿಂದ ಲಿಖಿತಮೂಲಕ ನೋಟೀಸು ವಗೈರೆ ತಗಾದೆಯನ್ನು ಬಾಕಿದಾರನಿಗೆ ಅಥವಾ ಫವತಿಯಾದವನ ವಾರಸುದಾರರಿಗೆ ಕೊಡಬೇಕು ನೋಟೀಸಿನಲ್ಲಿ ಕಂಡ ವಾಯಿದೆಯೊಳಗಾಗಿ ಬಾಕಿ ವಸೂಲಾಗದೆ ಹೋದಪಕ್ಷದಲ್ಲಿ ಪಂಚಾಯಿತರು ವಸೂಲಿ ತರವೂದು ಪಡೆಸಬೇಕು ನೋಟೀಸಿನ ವಾಯಿದೆ ಪೂರೈಸಿದ ತಾರೀಖು ಲಾಗಾಯಿತು ವಸೂಲಾಗುವ ತಾರೀಖಿನವರೆವಿಗೆ ಬಾಕಿಯಾಗುವ ಮೊಬಲಗಿನ ಪ್ರತಿ ರೂಪಾಯಿ ಒಂದಕ್ಕೆ ತಿಂಗಳಿಗೆ

೩¼ ~~ಮೂರು~~ ಕಾಸಿನಂತೆ ಬಡ್ಡಿ ದಾಖಲ್ಮಾಡಬೇಕು ಇಂಥಾ ಬಾಕಿದಾರನ ಮೇಲೆ ವಸೂಲಿಗ್ಗೆ ನಡೆಸುವ ದಾವೆ ವಗೈರೆ ನಡವಳಿಕಗೆ ಸೊಸೈಟಿಗೆ ತಗಲುವ ಖರ್ಚನ್ನೆಲ್ಲಾ ಸದರಿ ಬಾಕಿದಾರನಿಂದ ವಸೂಲ್ಮಾಡಿಕೊಳ್ಳಬೇಕು

18 ವಿಶೇಷ ಸಂದರ್ಭಗಳಲ್ಲಿ ಮೃತಪಟ್ಟವನ ಉತ್ತರ ಕ್ರಿಯಾದಿಗಳಿಗಾಗಲಿ ಅಥವಾ ಆತನ ಕುಟುಂಬದ ಗೃಹಕೃತ್ಯಕ್ಕೆ ಅವಶ್ಯಕವಾಗಿದ್ದರೆ ಆಗಲಿ ಆತನ ಷೇರು ಮೊಬಲಗಿನಲ್ಲಿ ತಮಗೆ ಸೂಕ್ತವಾಗಿ ತೋರಿದಷ್ಟನ್ನು ಪಂಚಾಯಿತರು ಆತನ ವಾರಸುದಾರರಿಗಾಗಲಿ ಅಥವಾ ನಾಮಿನಿಗಾಗಲಿ ಒಡನಯೇ ಕೊಡಬಹುದು

16 ~~19~~ ಸೊಸೈಟಿಯು ಆಡಳಿತಗಳಿಗೆ ಉಪಯೋಗಿಸಲ್ಪಡುವ ಮೂಲಧನಕ್ಕೆ ಸೇರುವ ಬಾಬುಗಳು ಯಾವುವೆಂದರೆ,

ಮೂಲಧನ

(1) ಪ್ರವೇಶ ಧನ
(2) ಷೇರು ಫೀ
(3) ಷೇರು ಧನ
(4) ಡಿಪಾಜಿಟ್ಟು ಮೊಬಲಗು
(5) ಸೊಸೈಟಿಗೆ ಹೊರಗಿನಿಂದ ತರುವ ಸಾಲ
(6) ~~ಮೆಂಬರುಗಳಿಗೆ ಸಾಲ ಕೊಡುವುದರಿಂದ ಬರುವ ಬಡ್ಡಿ~~
~~(7) ವ್ಯಾಪಾರದ ಲಾಭ ಮತ್ತು~~
~~(8) ಇತರ ವಿಧವಾದ ಲಾಭಗಳು~~

ಕಾಲಂ ೮ ರ ಸ್ಥಳದಲ್ಲಿ ಸಲ್ಲಬೇಕಾದ [illegible] ಸೇರಿಸಬೇಕು

17 ~~20~~ ಸಂಘದವರು ಆಗಿಂದಾಗ್ಗೆ ನಿರ್ಧರಿಸುವ ಪರಿಮಿತಿಗೆ ಒಳಪಟ್ಟು ರಿಜಿಸ್ಟ್ರಾರವರ ಅನುಮತಿ ಮೇಲೆ ಪಂಚಾಯಿತರು ಸೊಸೈಟಿಯ ಉಪಯೋಗಕ್ಕಾಗಿ ಹೊರಗಿನಿಂದ ಸಾಲವನ್ನು ತರಬಹುದು

ಸಾಲ ತರುವುದು

೧೮ [illegible] ಪಂಚಾಯಿತರಿಗೆ ಸೂಕ್ತತೋರಿದಲ್ಲಿ ಮೆಂಬರುಗಳಿಂದಲಾಗಲೀ ಅಥವಾ ಇತರರಿಂದಲಾಗಲೀ ಡಿಪಾಜಿಟ್ಟುಗಳನ್ನು ತೆಗೆದುಕೊಳ್ಳಬಹುದು

ಡಿಪಾಜಿಟ್ಟುಗಳು

೧೯ [illegible] ಡಿಪಾಜಿಟ್ಟುಗಳು ಎರಡ ವಿಧಗಳಾಗಿರತಕ್ಕದ್ದು —(i) ಫಿಕ್ಸೆಡ್ ಡಿಪಾಜಿಟ್ (ii) ಚಾಲ್ತಿ ಡಿಪಾಜಿಟ್

(i) ಫಿಕ್ಸೆಡ್ ಡಿಪಾಜಿಟ್ ಅಂದರೆ ವಾಯಿದೆಯೊಳಗೆ ವಾಪಸ್ಸ್ಮಾಡದೆ ಇರಬಹುದಾದ ಡಿಪಾಜಿಟ್ ಇದು 10 ರೂಪಾಯಿಗೆ ಕಡಿಮೆ ಇಲ್ಲದಂತೆಯೂ ಮೂರ ತಿಂಗಳ ವಾಯಿದೆಗೆ ಕಮ್ಮಿ ಇಲ್ಲದಂತೆಯೂ ತೆಗೆದುಕೊಳ್ಳತಕ್ಕದ್ದು

(ii) ಚಾಲ್ತಿ ಡಿಪಾಜಿಟ್ಟುಗಳು—ಇವುಗಳು ವಾಪಸ್ ಕೇಳಿದಾಗ ಒದಗುತ್ತ

ಈ ಮೇಲ್ಕಂಡ ಎರಡು ಡಿಪಾಜಿಟ್ಟುಗಳ ವಿಷಯದಲ್ಲಿ ಬಡ್ಡಿಯನ್ನೂ ಇತರ ವಿಷಯಗಳನ್ನೂ ಪಂಚಾಯಿತರು ಡಿಪಾಜಿಟ್ಟು ತೆಗೆದುಕೊಳ್ಳುವದಕ್ಕೆ ಮುಂಚೆ ಒಳ ನಿಬಂಧನೆಗಳಿಂದ ಇತ್ಯರ್ಥಮಾಡಬೇಕು

(iii) ಪಂಚಾಯಿತರು ಯಾವ ಕಾಲದಲ್ಲಾಗಲಿ ಡಿಪಾಜಿಟ್ಟುಗಳನ್ನು ತೆಗೆದುಕೊಳ್ಳುವದಿಲ್ಲವೆಂದು ಹೇಳಬಹುದು

(iv) ಸೊಸೈಟಿ ಮೆಂಬರಲ್ಲದವರಿಂದ ತೆಗೆದುಕೊಳ್ಳುವ ಡಿಪಾಜಿಟ್ಟು ಮೂಬಲಗು ಯಾವ ಕಾಲದಲ್ಲೂ ಮೆಂಬರುಗಳು ತೆಗೆದುಕೊಳ್ಳುವ ಒಟ್ಟು ಷೇರು ಬಂಡವಾಳದಲ್ಲಿ ಶೇ[illegible]80 ಕ್ಕಿಂತ ಹೆಚ್ಚಾಗಿರಕೂಡದು

(v) ಡಿಪಾಜಿಟ್ಟುಗಳ ಮೇಲೆ ಕೊಡುವ ಬಡ್ಡಿ ಶೆ ಕಡಾ ಸಾಲಿಯಾನಾ 6¼ ಗಿಂತ ಜಾಸ್ತಿಯಾಗಿರಕೂಡದು

೨೦ [illegible] ಸಾಲವು ಮೆಂಬರುಗಳಿಗೆ ಮಾತ್ರ ಕೊಡಬಹುದು ಸಾಲಪಡಿಯುವ ಮೆಂಬರಿಂದ ಸರಿಯಾದ ವಸ್ತೈಜು ತೆಗೆದುಕೊಳ್ಳದೆ ಯಾವ ಸಾಲವನ್ನೂ ಕೊಡಕೂಡದು ವಾಯಿದೆ ಪೂರೈಸುವುದರೊಳಗಾಗಿ ತಾನು ತೆಗೆದುಕೊಂಡಿರುವ ಸಾಲವನ್ನು ಮೆಂಬರು ವಾಪಸ್ ಮಾಡಿದಲ್ಲಿ ಪಂಚಾಯಿತರು ಮಾಡಿಕೊಳ್ಳುವ ಒಳ ನಿಬಂಧನೆಗಳಿಗನುಸಾರವಾಗಿ ಮೆಂಬರಿಂದ ಪಡೆದಿರುವ ಬಡ್ಡಿಯನ್ನು ವಾಪಸ್ ಕೊಡಬಹುದು ವಾಯಿದೆಗೆ ಸರಿಯಾಗಿ ಸಾಲವನ್ನು ತೀರಿಸದಿದ್ದಲ್ಲಿ ಪಂಚಾಯಿತರು ಮಾಡಿಕೊಳ್ಳುವ ಒಳ ನಿಬಂಧನೆಗಳಿಗನುಸಾರ

ಸಾಲ ಕೊಡುವುದು ಮೆಂಬರಿಗೆ ಮಾತ್ರ

ವಾಗಿ ಸುಸ್ತಬಡ್ಡಿ ದಾಖಲ್ಮಾಡಿ ಮುಂದಿನಕ್ರಮ ಜರುಗಿಸಬೇಕು ಹೀಗೆ ವಸೂಲಾದ ಸುಸ್ತು ಬಡ್ಡಿಯನ್ನು ರಿಜರ್ವ್ ಫಂಡಿಗೆ ಸೇರಿಸತಕ್ಕದ್ದು

21 ಸಾಲಗಳನ್ನು ~~ಕೆಳಗೆ ನಮೂದಿಸಲ್ಪಡುವ ಪ್ರಯೋಜನಾರ್ಥ ಕಂಡುಬರುವ~~ ಉದ್ದೇಶಗಳಿಗೆ ಮಾತ್ರವೇ ಕೊಡಬೇಕು —

ಸಾಲದ ಉದ್ದೇಶ

(1) ಬೀಜ, ಗೊಬ್ಬರ, ವ್ಯವಸಾಯದ ಮುಟ್ಟುಗಳು ಮತ್ತು ಇತರ ವ್ಯವಸಾಯದ ಖರ್ಚಿಗೆ

(2) ದನಕರುಗಳು ಮತ್ತು ಅವಕ್ಕೆ ದಾಣಿಚಾರ ಕೊಂಡುಕೊಳ್ಳುವುದಕ್ಕೆ,

(3) ಗಾಡಿ ಮಾಡಿಸುವುದಕ್ಕೂ ಮತ್ತು ಕೊಂಡುಕೊಳ್ಳುವುದಕ್ಕೂ,

(4) ಸರ್ಕಾರದ ಕಂದಾಯ ಕೊಡುವುದಕ್ಕೂ

(5) ಜಮೀನ ಆಬಾದು ಮಾಡುವುದಕ್ಕೂ ಮತ್ತು ಕೊಂಡುಕೊಳ್ಳುವುದಕ್ಕೂ

(6) ವಾಸದಮನೆ ಅಥವಾ ದನದ ಕೊಟ್ಟಿಗೆ ಕಟ್ಟುವದಕ್ಕೂ, ಕೊಂಡುಕೊಳ್ಳುವುದಕ್ಕೂ, ಅಥವಾ ದುರಸ್ತು ಮಾಡುವುದಕ್ಕೂ,

(7) ಕೈಗಾರಿಕೆಯವರಿಗೆ ಸಾಮಗ್ರಿ ಒದಗಿನ ಕೊಳ್ಳುವುದಕ್ಕೆ,

(8) ಚಿಲ್ಲರೆ ವ್ಯಾಪಾರದವರಿಗೆ ವ್ಯಾಪಾರಕ್ಕೆ,

(9) ಹಿಂದಿನ ಸಾಲ ತೀರಿಸುವದಕ್ಕೆ,

(10) ಆಹಾರದ ಸಾಮಾನುಗಳನ್ನೂ ಇನ್ನೂ ಅವಶ್ಯಕವಾದ ಇತರ ಸಾಮಾನುಗಳನ್ನೂ ಕೊಂಡುಕೊಳ್ಳುವುದಕ್ಕೆ,

(11) ಶುಭಾಶುಭ ಕಾರ್ಯಗಳನ್ನು ಮಾಡುವುದಕ್ಕೆ

22 ~~25~~ ಯಾವುದ ದರೂ ಒಂದು ಉದ್ದೇಶ್ಯಕ್ಕಾಗಿ ಪಡೆದ ಸಾಲವು ಆ ಉದ್ದೇಶ್ಯಕ್ಕಲ್ಲದೆ ಇತರ ವಿಧದಲ್ಲಿ ಉಪಯೋಗಿಸಲ್ಪಟ್ಟಿರುತ್ತೆಂದು ಪಂಚಾಯಿತರು ಅಭಿಪ್ರಾಯಪಟ್ಟರೆ ಸದರಿ ಸಾಲದ ಬಾಬುಗನ್ನು ತಕ್ಷಣ ವಸೂಲ್ಮಾಡಲು ನಡವಳಿಕೆ ನಡೆಸಬೇಕು

~~26 ಯಾವ ಮೆಂಬರೇ ಆಗಲಿ ಸೊಸೈಟಿಯಲ್ಲಿ ಒಂದು ಕಾಲದಲ್ಲಿ .... ರೂಪಾಯಿಗಳಿಗಿಂತಲೂ ಜಾಸ್ತಿಯಾಗಿ ಸಾಲ ಪಡೆಯಕೂಡದು ವಿಶೇಷ ಸಂದರ್ಭಗಳಲ್ಲಿ ಜನರಲ್ ಮೀಟಿಂಗಿನಲ್ಲಿ ಒಪ್ಪಿದಪಕ್ಷದಲ್ಲಿ ರಿಜಿಸ್ಟ್ರಾರವರ ಸ್ಪೆಷಲ್ ಮಂಜೂರಾತಿಯನ್ನು ಪಡೆದು ಯಾವ ಮೆಂ~~

ಸಾಲದ ಪರಿಮಿತಿ

ಬರಿಗಾಗಲಿ ಹೇಳ್ಕಂಡ ಅಧಿಮಿತಿಗೆ ಮೀರಿದ ಸಾಲವನ್ನು ಕೊಡಬಹುದು

ಸಾಲದ ವಾಯಿದೆ

27 ಸಾಲ ತೀರಿಸಬೇಕಾದ ವಾಯಿದೆಯನ್ನು ಪಂಚಾಯಿತರು ಸಾಲದ ಸ್ವಭಾವಾನುಸಾರ ನಿರ್ಧರಿಸತಕ್ಕದ್ದು. ವ್ಯಾಪಾರಕ್ಕಾಗಿ ಕೊಟ್ಟ ಸಾಲಗಳು ಆರು ತಿಂಗಳ ವಾಯಿದೆಗಿಂತ ಹೆಚ್ಚಿರಕೂಡದು. ಒಂದು ವರುಷದ ಫಸಲು ಮಾಡುವುದಕ್ಕೆ ಕೊಟ್ಟ ಸಾಲವು ಆ ಫಸಲು ಬೆಳೆಯಾಗಿ ಬರುವ ಕಾಲಕ್ಕೆ ಮೀರಿರಕೂಡದು. ಹಿಂದಿನ ಸಾಲಗಳನ್ನು ತೀರಿಸುವುದಕ್ಕಾಗಿ ಸೊಸೈಟಿಯಿಂದ ಕೊಟ್ಟ ಸಾಲದ ವಾಯಿದೆಯು ಐದು ವರುಷಕ್ಕೆ ಮೀರಿರಕೂಡದು. ಆದರೆ ಆಗಿಂದಾಗ್ಗೆ ಪಂಚಾಯಿತರು ನಿರ್ಧರಿಸುವಂತೆ ಕಂತುಗಳು ಬಾಕಿಬಿದ್ದಲ್ಲಿ ವಾಯಿದೆ ಲಕ್ಷ್ಯವಿಡದೆ ಪೂರ್ತಿ ಸಾಲವನ್ನು ಸುಸ್ತಿ ಬಡ್ಡಿಯೊಂದಿಗೆ ತಕ್ಷಣ ವಸೂಲ್ಮಾಡತಕ್ಕದ್ದು.

ಸಾಲದ ತರಹೆ

28 ಈ ಕೆಳಗೆ ಕಂಡಂತೆ ಸಾಲಗಳು ಕೊಡಲ್ಪಡುವವು,—

(1) ಸಾಲ ಅಪೇಕ್ಷಿಸುವ ಮೆಂಬರಿನ ಹೆಸರಿನಲ್ಲಿ ಸೊಸೈಟಿಯಲ್ಲಿ ಡಿಪಾಜಿಟ್ಟು ಅಥವಾ ಷೇರು ಮೊಬಲಗು ಏನಾದರೂ ಇದ್ದರೆ ಅಂಥಾ ಡಿಪಾಜಿಟ್ಟು ಅಥವಾ ಷೇರು ಮೊಬಲಗು ಪೈಕಿ ಶೇಕಡ ರಷ್ಟು

(2) ಆಧಾರ, ಭೋಗ್ಯ, ಮಾವದಕ್ಕೂ ಒಳಪಡದ ಸಾಲ ಅಪೇಕ್ಷಿಸುವ ಮೆಂಬರಿನ ಸ್ವಂತ ಖಾತೆ ಮತ್ತು ಅನುಭವಕ್ಕೆ ಸೇರಿನ ಸ್ಥಿರಸ್ವತ್ತಿನ ಆಧಾರದ ಮೇಲೆ ಸ್ವತ್ತಿಗೆ ಅಂದಾಜಾಗುವ ಬೆಲೆಯಲ್ಲಿ ಶೇಕಡ ರಷ್ಟು,

(3) ಇಬ್ಬರು ಮೆಂಬರಗಳ ಜಂಟಿ ಮತ್ತು ಪ್ರತ್ಯೇಕ ಪ್ರತ್ಯೇಕ ಜವಾಬ್ದಾರಿ ಮೇಲೆ ಸಾಲ ಅಪೇಕ್ಷಿಸುವ ಮೆಂಬರಿಗೆ ಸಾಲ ಕೊಡಬಹುದು. ಆದರೆ ಜಾಮೀನಾಗುವ ಮೆಂಬರು ಯಾವ ವೇಳೆಯಲ್ಲಿಯೂ

ರೂಪಾಯಿಗಳಿಗೆ ಜಾಸ್ತಿಯಾಗಿ ಬಟ್ಟು ಜಾಮೀನಾಗಿರಕೂಡದು

(4) ಕಂತು ಸಾಲ

ಐದು ತಿಂಗಳ ಕಂತು ಸಾಲ, ಹತ್ತು ತಿಂಗಳ ಕಂತು ಸಾಲ ಎಂದು ಎರಡು ವಿಧಗಳಾಗಿರತಕ್ಕದ್ದು ಐದು ತಿಂಗಳ ಸಾಲದ ಮೇಲೆ ಐದು ರೂಪಾಯಿ ಅಥವಾ

3 [illegible]

24 [illegible]

ಅದರ ಭಿನ್ನಾಂಶಕ್ಕೆ 0—2—6 ಪೈಯ್ಯನ್ನು, ಐದು ತಿಂಗಳ ಸಷ್ಟೆಯಂತೆ ಮುಂಗಡವಾಗಿ ಸಾಲ ಕೊಡುವಾಗಲೇ ವಸೂಲ್ಮಾಡಿಕೊಳ್ಳತಕ್ಕದ್ದು ಹತ್ತು ತಿಂಗಳ ಕಂತು ಸಾಲಕ್ಕೆ ಐದು ರೂಪಾಯಿ ಅಥವಾ ಅದರ ಭಿನ್ನಾಂಶಕ್ಕೆ 0—4—0 ಆಣೆಯನ್ನು ಹತ್ತು ತಿಂಗಳಿಗೂ ಸಷ್ಟೆಯಂತೆ ಸಾಲ ಕೊಡುವಾಗಲೇ ಮುಂಗಡವಾಗಿ ವಸೂಲ್ಮಾಡಿಕೊಳ್ಳತಕ್ಕದ್ದು ಮೇಲ್ಕಂಡ ಕಂತುಗಳನ್ನು ಸಕಾಲದಲ್ಲಿ ಪಾವತಿ ಮಾಡದಿದ್ದರೆ ತಪ್ಪಿದ ಕಂತಿನ ಒಂದು ರೂಪಾಯಿ ಅಥವಾ ಅದರ ಭಿನ್ನಾಂಶದ ಮೇಲೆ ಒಂದು ತಿಂಗಳಿಗೆ ಅಥವಾ ಅದರ ಭಿನ್ನಾಂಶಕ್ಕೆ ಮೂರುಕಾಸು ಸುಸ್ತು ಬಡ್ಡಿಯನ್ನು ವಸೂಲ್ಮಾಡತಕ್ಕದ್ದು

(5) ಪಂಚಾಯಿತರು ಒಪ್ಪಿದರೆ ಮೆಂಬರಿಗೆ ಅವನ ಸ್ವಂತ ಜವಾಬ್ದಾರಿ ಮೇಲೆ ಒಂದು ತಿಂಗಳ ವಾಯಿದೆಗೆ ಮೀರದಂತೆ ರೂಪಾಯಿಗಳಿಗೆ ಜಾಸ್ತಿ ಇಲ್ಲದಂತೆ ಕೈಗಡ ಕೊಡಬಹುದು

ಜಟ ಜವಾಬ್ದಾರಿ

29 (1) ಜಾಮೀನಾಗಿರುವವರು ಫೌತಿಯಾಗಲೀ ಅಥವಾ ಸೊಸೈಟಿಯ ಆಡಳಿತಕ್ಕೆ ಒಳಪಟ್ಟ ಗ್ರಾಮಗಳಿಂದ ಖಾಯಂ ಆಗಿ ಬಿಟ್ಟು ಹೋದರಾಗಲೀ ಅಥವಾ ಜಾಮೀನಾಗಿರಲು ಆತನಿಗೇನೇ ಇಷ್ಟವಿಲ್ಲದಿದ್ದರಾಗಲಿ ಸೆಕ್ರೆಟರಿಯವರ ರುಜುವಿನಿಂದ ಪಂಚಾಯಿತರು ಸಾಲ ಪಡೆದವರು ಹದಿನೈದು ದಿನಗಳೊಳಗಾಗಿ ಮತ್ತೊಬ್ಬ ಜಾಮೀನುದಾರನನ್ನು ಕೊಡಬೇಕೆಂದು ಲಿಖಿತಮೂಲಕ ನೋಟೀಸನ್ನು ಕೊಡತಕ್ಕದ್ದು ಹಾಗೆ ಬೇರೆ ಜಾಮೀನುದಾರನನ್ನು ಕೊಡದಿದ್ದರೆ ಅಂಥಾ ಮೆಂಬರು ಸಾಲವನ್ನು ಬಡ್ಡಿಸಹಿತ ತಕ್ಷಣವೇ ಕೊಟ್ಟುಬಿಡಬೇಕು.

(2) ಜಂಟಿ ಖಾತರೆಮೇಲೆ ಕೊಟ್ಟಿರುವ ಸಾಲಗಳಿಗೆ ಖಾತರೆದಾರನ ಲಿಖಿತಮೂಲಕ ಅನುಮತಿಯಿಲ್ಲದೆ ವಾಯಿದೆ ಹೆಚ್ಚು ಮಾಡಕೂಡದು

[illegible handwritten marginal note]

ಸಾಲದ ಬಡ್ಡಿ ದರ

೨೬ ~~೩೦~~ ಸೊಸೈಟಿಯಿಂದ ಮಂಬರುಗಳಿಗೆ ಕೊಡತಕ್ಕ ಸಾಲದಮೇಲೆ ಶೇಕಡಾ ~~ಮೂರೂ ನಾ ಎಂಟು ಆಣೆಯಿಂದ ಒಂದೂವರೆ ರೂಪಾಯಿವರೆಗೆ ಆಗಿಂದಾಗ್ಗೆ ಜನರಲ್ ಮೀಟಿಂಗಿನಲ್ಲಿ ಸಾಲದ ತರಹೆಗೆ ಅನುಸಾರವಾಗಿ ಗೊತ್ತು ಮಾಡಲ್ಪಡುವಂತೆ ಬಡ್ಡಿ ಹಾಕಲ್ಪಡತಕ್ಕದ್ದು~~ ಬಡ್ಡಿಯನ್ನು ಲೆಕ್ಕ ಮಾಡುವಾಗ ಎಷ್ಟು ದಿವಸಗಳಿಗೆ ಸಾಲ ಕೊಡಲ್ಪಡುತ್ತೋ ಅಷ್ಟು ದಿವಸಗಳಿಗೆ ಮಾತ್ರ

ಲೆಕ್ಕ ಮಾಡಬೇಕು ಚಕ್ರ ಬಡ್ಡಿಯನ್ನು ವಸೂಲ್ಮಾಡಕೂಡದು.

೨೬ ~~31~~ ಸೊಸೈಟಿಯು ರಿಜಿಸ್ಟರಾದ ಕೂಡಲೆಯೆ ಮೆಂಬ ರುಗಳೆಲ್ಲರೂ ಸೇರಿ ಮೀಟಿಂಗು ನಡಿಸಿ ಐದು ಜನಕ್ಕೆ ಕಮ್ಮಿಯಿಲ್ಲದೆ ಹದಿನೈದು ಜನಕ್ಕೆ ಜಾಸ್ತಿಯಿಲ್ಲದೆ ಸೊಸೈಟಿಗೆ ಸೇರಿರುವ ಮೆಂಬರುಗಳಪೈಕಿ ಪಂಚಾಯಿತರನ್ನು ಚುನಾಯಿಸಬೇಕು

ಪಂಚಾಯಿತರು

೨೭ ~~32~~ ಪ್ರತಿವರುಷವೂ ನಡೆಯುವ ಜನರಲ್ ಮೀಟಿಂಗಿನಲ್ಲಿ ಮೆಂಬರುಗಳು ಪಂಚಾಯಿತರನ್ನು ಹೊಸದಾಗಿ ತಮ್ಮಲ್ಲಿಯೇ ಚುನಾಯಿಸಬೇಕು ಹಳಬರನ್ನು ಚುನಾಯಿಸಿದರೂ ಚುನಾಯಿಸಬಹುದು

೨೮ ~~33~~ ಪಂಚಾಯಿತರು ತಮ್ಮೊಳಗೆ ಒಬ್ಬರನ್ನು ಪ್ರೆಸಿಡೆಂಟ್ (ಯಜಮಾನ) ರನ್ನಾಗಿಯೂ ಮತ್ತೊಬ್ಬರನ್ನು ಸೆಕ್ರೆಟರಿಯವರನ್ನಾಗಿಯೂ ನೇಮಿಸಬೇಕು ಅವಶ್ಯಕವಿದ್ದಲ್ಲಿ ಒಬ್ಬ ಟ್ರೆಜರರ್ ಮತ್ತು ಒಬ್ಬ ಅಸಿಸ್ಟೆಂಟ್ ಸೆಕ್ರೆಟರಿಯವರನ್ನು ನೇಮಿಸಿಕೊಳ್ಳಬಹುದು

೨೯ ~~34~~ ಪಂಚಾಯಿತರು ಎಷ್ಟಾವರ್ತಿ ಅವಶ್ಯಕವಿದ್ದರೂ ಅಷ್ಟಾವರ್ತಿ ಮೀಟಿಂಗು ನಡಿಸಬಹುದು ಆದರೆ ಕನಿಷ್ಠಪಕ್ಷ ತಿಂಗಳಿಗೆ ಒಂದಾವರ್ತಿಯಾದರೂ ನಡಿಸಲೇಬೇಕು ಇಂಥಾ ಮೀಟಿಂಗುಗಳಲ್ಲಿ ಐದುಜನ ಮೆಂಬರುಗಳು ಸೇರಿ ಕೋರಂ ಆಗತಕ್ಕದ್ದು ಈ ಮೀಟಿಂಗಿಗೆ ಪ್ರೆಸಿಡೆಂಟರು ಬಾರದಪಕ್ಷದಲ್ಲಿ ಪಂಚಾಯಿತರು ತಮ್ಮಲ್ಲಿ ಒಬ್ಬರನ್ನು ಚೇರ್‌ಮೆನ್‌ರನ್ನಾಗಿ ಮಾಡಿಕೊಳ್ಳತಕ್ಕದ್ದು ಪ್ರೆಸಿಡೆಂಟ್ ಅಥವಾ ಚೇರ್‌ಮೆನ್‌ರವರು ನಿರ್ಧಾರಕವಾದ (ಕ್ಯಾಸ್ಟಿಂಗ್ ಓಟ್) ಓಟನ್ನು ಹೊಂದಿರುವರು.

30 ~~35~~ ಪಂಚಾಯಿತರು ನಡೆಸಬೇಕಾದ ಕೆಲಸಗಳು ಯಾವುವೆಂದರೆ —

(1) ಮೆಂಬರಾಗುವುದಕ್ಕಾಗಿ ಬರುವ ದರಖಾಸ್ತುಗಳನ್ನು ಫೈಸಲ್ಮಾಡುವುದು

(2) ಖಯಲಾದು ಅಹವಾಲು ವಗೈರೆಗಳನ್ನು ವಿಚಾರಿಸಿ ಫೈಸಲ್ಮಾಡುವುದು

(3) ಸಾಲಕ್ಕೆ ಮೆಂಬರುಗಳಿಂದ ಬರುವ ದರಖಾಸ್ತುಗಳನ್ನು ವಿಮರ್ಶೆಮಾಡಿ ರೂಲ್ಸ್ ಅನುಸರಿಸಿ ಫೈಸಲ್ ಮಾಡುವುದು

(4) ~~ಸಾಲದ ಉದ್ದೇಶ್ಯಗಳನ್ನು ಪರೀಕ್ಷೆ ಮಾಡುವುದು ಮತ್ತು ಸಾಲ ತೀರಿಸಬೇಕಾದ ವಾಯಿದೆ ಕಾಲಗಳನ್ನು ಪ್ರತಿಸಂದರ್ಭದಲ್ಲೂ ಗೊತ್ತುಮಾಡುವುದು~~

(5) ~~ಸಾಲಕೊಡುವುದಕ್ಕೆ ಮುಂಚೆ ಖಾತರೆಯನ್ನು ಪರೀಕ್ಷಿಸಿ ನಿರ್ಧರಿಸುವುದು~~

(4) [illegible]

(5) [illegible]

(6) ಸೊಸೈಟಿಯು ಸೆಕ್ರೆಟರಿಗಳ ಮೂಲಕ ಲೆಕ್ಕ ಪತ್ರಗಳನ್ನು ಇಡುವುದು ಮತ್ತು ಜವಾಬ ದಾರ್ಜು ನಡಿಸುವುದು.

(7) ಸೆಕ್ರೆಟರಿಗಳ ಮೂಲಕ ಸೊಸೈಟಿಯು ಶಿಬ್ಬಂದಿಗೆ ಅವಶ್ಯಕವಾದ ಕೆಲಸಗಳನ್ನು ನೇಮಕ ಮಾಡುವುದ ಮತ್ತು ನೌಕರ ನ್ನು ಏರ್ಪಾಟು ಮಾಡುವುದು, ನೌಕರರಿಗೆ ರಜ ಕೊಡುವುದು, ಜುಲ್ಮಾನೆ ಹಾಕುವು ದು ಮತ್ತು ಅವರನ್ನು ಸಸ್ಪೆಂಡ ಮತ್ತು ಡಿಸಮಿಸ ಮಾಡುವುದು

(8) ಆರು ತಿಂಗಳಿಗೊಂದಾವರ್ತಿ (ಅಂದರೆ ಜನ ವರಿ 15ನೆ ತಾರೀಖಿನೊಳಗೊಂದಾವರ್ತಿ ಜುಲೈ 15ನೆ ತಾರೀಖಿನೊಳಗೊಂದಾವ ರ್ತಿ) ಸೊಸೈಟಿಯ ಆದಾಯ, ವೆಚ್ಚ, ಲಾಭ, ದೇಣಿ ವಗೈರೆ ತೋರಿಸುವ ಒಂದು ಬ್ಯಾಲೆನ್ಸ ಷೀಟನ್ನು ಅಂದರೆ ಭಷಮೂಹೆ ಆದಾಯ ವೆಚ್ಚ ವಪಟ್ಟಿ ತಯಾರ್ಮಾಡಿ ರಿಜಿ ಸ್ಟ್ರಾರವರಿಗೆ ಕಳುಹಿಸುವುದು, ಅವರು ಅದನ್ನು ಮಂಜೂರ್ಮಾಡಿದನಂತರ ಜನರಲ್ ಮಿಟಿಂಗ್ ನಡೆಸಿ ಬಹಿರಂಗಪಡಿಸುವುದು

(9) ಆಗಾಗ್ಯೆ ಮೆಂಬರುಗಳ ಮೇಲೆ ನಿಂತಿರುವ ಬಾಕಿಗಳನ್ನು ಪರಿಶೋಧಿಸುವುದು ಮತ್ತು ನಷ್ಟಕ್ಕೆ ರಹಾ ಇಲ್ಲದಂತೆ ಸದರಿ ಬಾಕಿ ಗಳನ್ನು ವಸೂಲ್ಮಾಡುವುದಕ್ಕೆ ತಕ್ಕ ಏರ್ಪಾಡು ಇಡುವುದು

(10) ಸೊಸೈಟಿಯ ತನಿಖೆವೇಳೆಯಲ್ಲಿ ಲೆಕ್ಕ ಪತ್ರ ಗಳನು ಒದಗಿಸುವುದು

(11) ಈ ಬೈಲಾಗಳಿಗೆ ವಿರೋಧವಿಲ್ಲದಂತೆ ಒಳ ನಿಬಂಧನೆಗಳನ್ನು ಏರ್ಪಾಡು ಮಾಡುವುದು ಮತ್ತು ರಿಜಿಸ್ಟ್ರಾರವರ ಅನುಮತಿ ಪಡೆ ದು ಅವುಗಳನ್ನು ಜಾರಿಗೆ ತರುವುದು

(12) ಸೊಸೈಟಿಯ ಮೆಂಬರುಗಳೆಲ್ಲಾ ಸೇರಿ ನಡಿಸ ತಕ್ಕದ್ದೆಂದು ಸ್ಪಷ್ಟವಾಗಿ ನಿಯಮಿಸಲ್ಪ ಡದೇ ಇರುವ ಸೊಸೈಟಿಯ ಸಂಬಂಧ ವಾದ ಮೇಲ್ವಿಚಾರಣೆಯನ್ನು ಮತ್ತು ಚಾಲ್ತಿ ಕೆಲಸಗಳನ್ನೂ ಮತ್ತು ಇತರ ಕೆಲಸಗಳನ್ನೂ ನಡಿಸುವುದು.

೩। ೩೬ ಸೊಸೈಟಿ ತರಫ್ ಬರೆದುಕೊಡುವ ದಸ್ತೈವೆ ಜುಗಳಿಗೆ ಪ್ರೆಸಿಡೆಂಟರು, ಸೆಕ್ರೆಟರಿಯವರು ಮತ್ತು ಮೂರು ಮಂದಿ ಇತರ ಪಂಚಾಯಿತರು ರುಜು ಮಾಡ ಬೇಕು

32 ~~37~~ ಪಂಚಾಯಿತರ ಪೈಕಿ ಯಾರಾದರೂ ಸಾಲಕ್ಕೆ ದರಖಾಸ್ತು ಕೊಟ್ಟರೆ ಆ ಬಗ್ಗೆ ನಡೆಯುವ ಮೀಟಿಂಗಿನಲ್ಲಿ ದರಖಾಸ್ತು ಕೊಟ್ಟ ಮೆಂಬರು ಸಮ್ಮತಿಯನ್ನು (ಓಟನ್ನು) ಕೊಡಕೂಡದು.

33 ~~38~~ ಪಂಚಾಯಿತರ ಪೈಕಿ ಯಾರಾದರೂ ಸೊಸೈಟಿಯ ಗೌರವಕ್ಕೂ ಮತ್ತು ಅಭಿವೃದ್ಧಿಗೂ ಕುಂದಕ ಬರುವಂತೆ ನಡೆದರೆ ಅಂಥವರನ್ನು ರಿಜಿಸ್ಟ್ರಾರವರು ವಜಾಮಾಡಿ ಬೇರೆ ಮೊಬಲಗನ್ನು ಭರ್ತಿಮಾಡುವಂತೆ ಏರ್ಪಾಡು ಮಾಡಬಹುದು

34 ~~39~~ ಪಂಚಾಯಿತರ ಮೀಟಿಂಗಿನ ಎಲ್ಲಾ ಸಂಗತಿಗಳನ್ನೂ ಅದಕ್ಕಾಗಿ ಇಟ್ಟಿರುವ ಪುಸ್ತಕದಲ್ಲಿ ದಾಖಲೆ ಮಾಡತಕ್ಕದ್ದು ಪ್ರೆಸಿಡೆಂಟ್ (ಯಜಮಾನ) ಅಥವಾ ಅವರ ಪ್ರತಿನಿಧಿ ಮತ್ತು ಸೆಕ್ರೆಟರಿ ಈ ನಡವಳಿಕೆಯನ್ನು ಮೀಟಿಂಗ್ ಆದವಡನೆ ರುಜು ಮಾಡತಕ್ಕದ್ದು

35 ~~40~~ ಪಂಚಾಯಿತರು ತಾವು ಮಾಡುವ ಎಲ್ಲಾ ಕೆಲಸಗಳಿಗೂ ಸೊಸೈಟಿಯವರಿಗೆ ಜವಾಬ್ದಾರರಾಗಿರುತ್ತಾರೆ

36 ~~41~~ ಸೆಕ್ರೆಟರಿಯವರು ಮಾಡತಕ್ಕ ಕೆಲಸಗಳು
ಸೆಕ್ರೆಟರಿ ಯಾವುವೆಂದರೆ —

(1) ಪಂಚಾಯಿತರ ಮತ್ತು ಸೊಸೈಟಿಯ ಮೀಟಿಂಗುಗಳಿಗೆ ಏರ್ಪಾಡು ಮಾಡುವುದು, ಸದರಿ ಮೀಟಿಂಗುಗಳಲ್ಲಿ ಹಾಜರಿರುವುದು ಮತ್ತು ನಡವಳಿಕೆಗಳನ್ನು ರಿಕಾರ್ಡು ಮಾಡುವುದು

(2) ಸೊಸೈಟಿಯ ಕೆಲಸದವೇಳೆಗಳಲ್ಲಿ ಹಾಜರಿರುವುದು

(3) ಸೊಸೈಟಿಯ ರಿಜಿಸ್ಟರುಗಳನ್ನು ಇಡುವುದು ಸೊಸೈಟಿಯ ತರಫ್ ಕಾಗದ ಪತ್ರಗಳನ್ನು ನಡೆಸುವುದು, ವಾರ್ಷಿಕ ರಿಪೋರ್ಟನ್ನು ಮತ್ತು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಬೇಕಾದ ಮಾಹೆವಾರಿ, ಲೆಕ್ಕ ಪತ್ರಗಳನ್ನು ಮತ್ತು ಆದಾಯ ವೆಚ್ಚದ ಪಟ್ಟಿಯನ್ನು ತಯಾರು ಮಾಡುವುದು ಮತ್ತು ಸೊಸೈಟಿಯ ದಸ್ತೈವಜುಗಳು ಮತ್ತು ಪುಸ್ತಕಗಳ, ಜವಾಬ್ದಾರಿ ವಹಿಸುವುದು

(4) ಸಾಲಕ್ಕೋಸ್ಕರ ಬರತಕ್ಕ ದರಖಾಸ್ತುಗಳನ್ನೂ, ಡಿಪಾಜಿಟ್ಟುಗಳನ್ನೂ ವಾಪಸ್ ತೆಗೆದುಕೊಳ್ಳುವುದಕ್ಕಾಗಿ ಬರುವ ಅರ್ಜಿಗಳನ್ನೂ ಸಹಾ ಪಂಚಾಯಿತರ ಅಭಿಪ್ರಾಯಕ್ಕೆ ಒದಗಿಸುವುದು ಮತ್ತು ಸೊಸೈಟಿಯ ಜಮಾ ಖರ್ಚುಬಾಬುಗಳಿಗೆ ಸರಿಯಾದ ರಶೀತಿ ವಗೈರೆ ದಾಖಲೆಗಳನ್ನಿಡುವುದು

(5) ಪಂಚಾಯಿತರ ಅಭಿಪ್ರಾಯಕ್ಕನುಸಾರ ವಾಗಿ ಸೊಸೈಟಿಯ ಜಮಾಖರ್ಚು ಹೊದ ಇದ ಎಲ್ಲಾ ಕಾರ್ಯವನ್ನೂ ನಡೆಸುವುದು ಮತ್ತು ಲೆಕ್ಕ ಪತ್ರಗಳನ್ನಿಡುವುದು.

37 [illegible] ಸೊಸೈಟಿಯ ಎಲ್ಲಾ ಆಡಳಿತಗಳು ಜನರಲ್ ಜನರಲ್ ಮಿ ಮೀಟಿಂಗಿನಲ್ಲಿ ಸೇರುವ ಮೆಂಬರುಗಳ ಟಿಂಗ ತನಿಖೆಗೆ ಒಳಪಟ್ಟಿರತಕ್ಕದ್ದು

38 [illegible] ಪಂಚಾಯಿತರಿಗೆ ಅವಶ್ಯಕ ಕಂಡುಬಂದಾಗ ಜನರಲ್ ಮೀಟಿಂಗನ್ನು ಕರೆಯಬಹುದು ವರುಷಕ್ಕೆ ಕನಿಷ್ಠ ಪಕ್ಷ ಒಂದಾವರ್ತಿಯಾದರೂ ಜೂನ್ ಆಖೈರಾದ ನಂತರ ಸದರಿ ಮೀಟಿಂಗು ಸೇರಬೇಕು ಆಗ ನಡೆ ಯುವ ಮೀಟಿಂಗು ಸಾಲಾಖೈರ್ ಮೀಟಿಂಗೆಂದು ಭಾವಿಸ ಲ್ಪಡತಕ್ಕದ್ದು ಸೊಸೈಟಿಯ ಮೆಂಬರುಗಳಾದ ಹತ್ತು ಅಥವಾ ಹೆಚ್ಚು ಜನಗಳು ಬರಹ ಮೂಲಕ ಕೇಳಿಕೊಂ ಡಾಗಲೂ ಮತ್ತು ರಿಜಿಸ್ಟ್ರಾರವರು ಅಪೇಕ್ಷಿಸಿದಾಗಲೂ ಹೆಚ್ಚು ಕಲ್ಲ ಮೀಟಿಂಗನ್ನು ನಡಿಸಬೇಕು ಮೆಂಬರು ಗಳು ಅಪೇಕ್ಷಿಸಿದ್ದಲ್ಲಿ ಮೀಟಿಂಗಿನ ಉದ್ದೇಶವನ್ನು ಮೆಂ ಬರುಗಳು ಬರಹಮೂಲಕ ಸೆಕ್ರೆಟರಿಯ ವರಿಗೆ ಕಳುಹಿ ಸಬೇಕು

39 [illegible] ಸೊಸೈಟಿಯ ಎಲ್ಲಾ ಮೆಂಬರುಗಳಿಗೂ ಮೀ ಟಿಂಗಿಗೆ ಏಳು ದಿನಕ್ಕೆ ಮುಂಚೆ ಮೀಟಿಂಗಿನ ಉದ್ದೇಶ, ಚರ್ಚಿಸಬೇಕಾದ ವಿಷಯ—ಇವುಗಳನ್ನು ಸಹ ದಿನ ನೋಟೀಸು ಮೂಲಕ ತಿಳಿಯಪಡಿಸಬೇಕು ಈ ಬೈಲಾ ರಿಜಿಸ್ಟ್ರಾರವರು ಕರೆಯುವ ಮೀಟಿಂಗಿಗೆ ಅನ್ವಯಿಸು ವದಿಲ್ಲ

40 [illegible] ಮೀಟಿಂಗಿನಲ್ಲಿ ಚರ್ಚಿಸಲ್ಪಡುವ ಪ್ರತಿ ವಿಷಯ ದಲ್ಲಿಯೂ ಒಬ್ಬ ಮೆಂಬರಿಗೆ ಒಂದು ಸಮ್ಮತಿ (ಓಟು) ಇರತಕ್ಕದ್ದು ರೂಲ್ಸ್ ಅಥವಾ ಬೈಲಾಗಳನ್ನನುಸರಿಸಿ ಸಮ್ಮತಿಗಳ ಹೆಚ್ಚು ಸಂಖ್ಯೆ ಮೇರಿಗೆ ವಿಷಯಗಳು ನಿರ್ಧರಿಸಲ್ಪಡಬೇಕು ಪ್ರತಿನಿಧಿಯಿಂದ ಓಟು ಕೊಡ ಲಾಗದು

41 [illegible] ಸಾಲ ಆಖೈರ್ ಜನರಲ್ ಮೀಟಿಂಗಿನಲ್ಲಿ ಕೆಳಗೆ ನಮೂದಿಸಿರುವ ಕೆಲಸಗಳು ನಡೆಯಬೇಕು

(1) ಪಂಚಾಯಿತರು ತಯಾರುಮಾಡಿ ಒಪ್ಪಿಸಿದ (i) ವಾರ್ಷಿಕ ರಿಪೋರ್ಟು, (ii) ಬ್ಯಾಲೆನ್ಸುಷೀಟು ಯಾನೆ [illegible] ಪಟ್ಟಿ, (iii) ಜಮಾ ಖರ್ಚು ಲೆಕ್ಕ ಮತ್ತು (iv) ಲಾಭ ನಷ್ಟದ ಪಟ್ಟಿ—ಇವುಗಳ ವಿಷ ಯದಲ್ಲಿ ಚರ್ಚಿಸಿ ಸೂಕ್ತ ತೀರ್ಮಾನವನ್ನು ಅಂಗೀಕರಿಸುವುದು

(2) ಮುಂದಿನ ಸಾಲಿಗೆ ಪಂಚಾಯಿತರನ್ನು ಚುನಾಯಿಸುವದು

(3) ಹಿಂದಿನ ಸಾಲಿನಲ್ಲಿ ಮೆಂಬರುಗಳು ತೆಗೆದ ಸಾಲಗಳಿಂದ ಅವರಿಗೆ ಯಾವ ವಿಧವಾಗಿ ಅನುಕೂಲವಾಯಿತೆಂಬುದನ್ನು ಚರ್ಚಿಸಿ, ಹೊರಗಿನಿಂದ ಇರತಕ್ಕ ಸಾಲದ ಮುಖಾಂತ್ರವಾಗಲಿ ಅಥವಾ ಡಿಪಾಜಿಟ್ ಮುಖಾಂತ್ರವಾಗಲಿ ಮುಂದಿನ ಸಾಲಿನಲ್ಲಿ ಸೊಸೈಟಿಗೆ ಉಂಟಾಗಬಹುದಾದ ಜವಾಬ್ದಾರಿಯನ್ನು ಗೊತ್ತುಮಾಡುವದು

(4) ಸೊಸೈಟಿಯ ಲೆಕ್ಖಗಳನ್ನು ಆಗಿಂದಾಗ್ಯೆ ತನಿಖೆ ಮಾಡುವುದಕ್ಕಾಗಿ ಪಂಚಾಯಿತರಲ್ಲದ ಇರುವ ಮೆಂಬರುಗಳ ಪೈಕಿ ಇಬ್ಬರನ್ನು ಆಡಿಟರುಗಳನ್ನಾಗಿ ಜನರಲ್ ಮೀಟಿಂಗನಲ್ಲಿ ಚುನಾಯಿಸಬೇಕು ಹೀಗೆ ಚುನಾಯಿಸಲ್ಪಟ್ಟವರು ಲೆಕ್ಖಗಳನ್ನು ಆಗಿಂದಾಗ್ಯೆ ತನಿಖೆ ಮಾಡಿದೊಡನೆಯೇ ಅವರ ರಿಪೋರ್ಟಿನ ಒಂದು ನಕಲನ್ನು ರಿಜಿಸ್ಟ್ರಾರವರಿಗೆ ಕಳುಹಿಸಬೇಕು ಮತ್ತೊಂದನ್ನು ಪಂಚಾಯಿತರಿಗೆ ಕೊಡಬೇಕು

(5) ಪ್ರೊವಿನ್ಷಿಯಲ್ ಬ್ಯಾಂಕಿಗೆ ಮತ್ತು ಫೆಡರಲ್ ಬ್ಯಾಂಕಿಂಗ್ ಯೂನಿಯನ್ನಿಗೆ ಸೊಸೈಟಿಯು ಮೆಂಬರಾಗಿದ್ದ ಪಕ್ಷದಲ್ಲಿ ಸೊಸೈಟಿಯ ಪರವಾಗಿ ತಮ್ಮಲ್ಲಿನ ಮೆಂಬರುಗಳ ಪೈಕಿ ಪ್ರತಿನಿಧಿಗಳನ್ನು ಚುನಾಯಿಸುವದು

42 ~~47~~ ರಿಜಿಸ್ಟ್ರಾರವರ ಅನುಮತಿ ಪಡೆದು ಪಂಚಾಯಿತರು ಆಗಿಂದಾಗ್ಯೆ ಸೊಸೈಟಿಯ

ಖರ್ಚು

ಖರ್ಚುಗಳನ್ನು ಜನರಲ್ ಬಾಡಿಯವರು ತೀರ್ಮಾನಿಸಿರುವ ಮೊತ್ತದೊಳಗೆ ನಿರ್ಧರಿಸಬಹುದು ಇದರಲ್ಲಿ ಮನಬಾಡಿಗೆ ಶಿಬ್ಬಂದಿ ಮತ್ತು ಕಂಟಿಜಂಟು ಛಾರ್ಜುಗಳು ಸೇರಿರಬಹುದು ~~ಸೊಸೈಟಿಯ ಸೆಕ್ರೆಟರಿ ಮುಂತಾದ ಅಧಿಕಾರಿಗಳಿಗೆ ಬಹಳ ವಿಶೇಷ ಮುತುವರ್ಜಿಯಿಂದ ಕೆಲಸ ನಡಿಸಿದ್ದಕ್ಕಾಗಿ ಕೊಡಬೇಕೆಂದು ರಿಜಿಸ್ಟ್ರಾರವರ ಅನುಮತಿಯೊಂದಿಗೆ ಜನರಲ್ ಬಾಡಿಯವರು ತೀರ್ಮಾನಿಸಿದ ಮೊತ್ತವೂ ಇದೇ ರೀತಿಯಲ್ಲಿ ಖರ್ಚು ಎನಿಸಿಕೊಳ್ಳುತ್ತದೆ.~~

43 ~~48~~ ಈ ಸೊಸೈಟಿಯಲ್ಲಿ ಬರುವ ಲಾಭವು ವರುಷಕ್ಕೊಂದಾವರ್ತಿ ಜೂನ್ ಆಖೈರಿನವರಿಗೆ

ನಫೆ

ಲೆಕ್ಖವಾಗಿ ಮೆಂಬರುಗಳಿಗೆ ಬಟವಾಡೆ ಆಗುತ್ತದೆ ಲಾಭವನ್ನು ಗೊತ್ತುಮಾಡುವುದರಲ್ಲಿ ಬಸೂ

ಬಾಕಿ ಮೊಬಲಗು ಮಾತ್ರ ಜಮಾ ಲೆಕ್ಕಕ್ಕೆ ಸೇರಿಸತಕ್ಕದ್ದು ಬಡ್ಡಿ ಬರಬೇಕಾಗಿದ್ದು ವಸೂಲಾಗದೆ ಇರುವ ಮೊಬಲಗು ಲೆಕ್ಕಕ್ಕೆ ಜಮಾ ಆಗುವದಿಲ್ಲ ಕಾರ್ಯನಿರ್ವಾಹಕ್ಕಾಗಿ ತಗಲುವ ಖರ್ಚನ್ನು ಮತ್ತು ಡಿಪಾಜಿಟ್ಟುಗೂ ಇತರ ಸಾಲಗಾರರಿಗೂ ಕೊಡತಕ್ಕ ಬಡ್ಡಿಯನ್ನು ಮೊದಲು ಕಟಾಯಿಸತಕ್ಕದ್ದು ಉಳಿದ ನಫೆ ಪೈಕಿ ಹೊರಗಿನಿಂದ ತಂದ ಸಾಲದ ಮೇಲಿನ ಮತ್ತು ಡಿಪಾಜಿಟ್ಟಿನ ಪೂರ ಲಾಭವನ್ನೂ ಮತ್ತು ಷೇರು ಮೊಬಲಗಿನಿಂದ ಬಂದ ಲಾಭದ ಪೈಕಿ ಶೇಕಡ 25ಕ್ಕೆ ಕಮ್ಮಿ ಇಲ್ಲದಷ್ಟನ್ನೂ ರಿಜರ್ವ್ ಫಂಡಿಗೆ ಸೇರಿಸತಕ್ಕದ್ದು ಇದು ಜಾತಾ ಉಳಿದ ಮೊಬಲಗಿನಲ್ಲಿ ಶೇಕಡ 5ಕ್ಕೆ ಕಮ್ಮಿ ಇಲ್ಲದಂತೆ ಅನ್ಯೋನ್ಯ ಸಹಾಯ ಸಂಘಗಳ ,ಅಭಿವೃದ್ಧಿಗೂ ತಮ್ಮ ತಾಲ್ಲೂಕಿನ ಏರ್ಪಡಿಸಬಹುದಾದ ಯೂನಿಯನ್ ಖರ್ಚಿಗೂ, ನಡಿಸಬಹುದಾದ ಕಾನ್ಫರೆನ್ಸ್ ಖರ್ಚಿಗೂ, ಮತ್ತು ಇತರ ತಮ್ಮ ಗ್ರಾಮಗಳ ಪುರೋಭಿವೃದ್ಧಿಯ ಖರ್ಚಿಗೂ ಒಂದು ಫಂಡಾಗಿ ಏರ್ಪಡಿಸತಕ್ಕದ್ದು ಉಳಿದಿದ್ದರಲ್ಲಿ ವರುಷಕ್ಕೆ ಶೇಕಡ ~~೩೬~~ ಹೆಚ್ಚಿಲ್ಲದಂತೆ ವಸೂಲಾದ ಷೇರು ಮೊಬಲಗಿನ ಮೇಲೆ ನಫೆಯು ಹಂಚಲ್ಪಡತಕ್ಕದ್ದು ಉಳಿದ ಮೊಬಲಗನ್ನು ರಿಜರ್ವ್ ಫಂಡಿಗಾಗಲಿ ಡಿವಿಡೆಂಡ್ ಈಕ್ವಲೈಜೇಷನ್ ಫಂಡಿಗಾಗಲೀ ಅಥವಾ ಮೆಂಬರುಗಳಿಂದ ಬಂದ ಬಡ್ಡಿ ಮೇಲಿನ ರಿಬೇಟಿಗೆ ಆಗಲೀ ಅಥವಾ ಅವರು ಸೊಸೈಟಿಯಲ್ಲಿ ಕೊಂಡುಕೊಂಡ ವ್ಯಾಪಾರದ ಬೆಲೆಯ ಮೇಲಿನ ರಿಬೇಟು ಆಗಿಯಾಗಲೀ ಹಂಚತಕ್ಕದ್ದು

44 ~~49~~ ಪ್ರತಿ ಸಂವತ್ಸರದಲ್ಲಿಯೂ ರಿಜಿಸ್ಟ್ರಾರವರ ಅಪ್ಪಣೆ ಪಡೆದು ಕೋ ಆಪರೇಟಿವ ಮತ್ತು ಧರ್ಮದ ಫಂಡಿನ ಕೆಲವು ಮೊಬಲಗನ್ನು ಉಪಯೋಗಿಸಲು ಪಂಚಾಯಿತರಿಗೆ ಅಧಿಕಾರವಿರುತ್ತೆ

ಕೋಆಪರೇಟಿವ ಮತ್ತು ಧರ್ಮದ ಫಂಡು

45 ~~50~~ ನಫೆಯಲ್ಲಿ ಆಗಿಂದಾಗ್ಯೆ ಸೊಸೈಟಿಯವರು ಪ್ರತ್ಯೇಕವಾಗಿ ಇಡತಕ್ಕ ಆಪದ್ಧನವು ರಿಜರ್ವ್ ಫಂಡ್ ಎನಿಸುವುದು ಈ ರಿಜರ್ವ್ ಫಂಡನ್ನು ಸರ್ಕಾರಿ ಅಥವಾ ಪೋಸ್ಟು ಆಫೀಸಿನ ಸೇವಿಂಗ್ಸು ಬ್ಯಾಂಕುಗಳಲ್ಲಾಗಲೀ ಅಥವಾ ಸೊಸೈಟಿಯು ಮೆಂಬರಾಗಿ ಸೇರಿರುವ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕುಗಳಲ್ಲಾಗಲಿ ರಿಜಿಸ್ಟ್ರಾರವರ ಅನುಮತಿಯಂತೆ ಡಿಪಾಜಿಟ್ಟು ಮಾಡಬೇಕು

ರಿಜರ್ವ ಫಂಡು

46 ~~51~~ ವಸೂಲಿ ಕ್ರಮ ಮುಂತಾದ್ದು ನಡೆಸಿ ಯಾವ ವಿಧದಿಂದಲೂ ವಸೂಲಿಗೆ ರಹ ಇಲ್ಲದೆ ಸಾಲಗಳಿಂದ ಆ ಸಾಲಿನ ನಷ್ಟವು ಲಾಭಕ್ಕಿಂತ ಜಾಸ್ತಿಯಾದ್ದಲ್ಲಿ ರಿಜಸ್ಟ್ರಾರವರ ಅಪ್ಪಣೆ ಪಡೆದು ಅಂಥಾ ಉಕ್ಸಾನನ್ನು ರಿಜರ್ವಿನಿಂದ ಸಂಘದ ಜವಾಬ್ದಾರಿಗೆ ಸಾಮಾನ್ಯವಾಗಿ

ಭರ್ತಿ ಮಾಡಿಕೊಳ್ಳಬಹುದು. ಆದರೆ ಯಾವ ಸಾಲವನ್ನು ಸರಿಯಾದ ತನಿಖೆ ಮತ್ತು ಸಂಪೂರ್ಣವಾದ ವಸೂಲಿ ಕ್ರಮ ಜರುಗಿಸದೆ ವಜಾ ಮಾಡಕೂಡದು.

೫೭ ೫೨. ರಿಸರ್ವ್ ಫಂಡು ಮೊಬಲಗು ಮೆಂಬರುಗಳಲ್ಲಿ ಯಾವಾಗಲೂ ಭಾಗಿಸಲ್ಪಡುವದಿಲ್ಲ. ಸೊಸೈಟಿ ವೈಂಡಪ್ ಆದರೆ ನ್ಯಾಯವಾದ ಎಲ್ಲಾ ಖರ್ಚನ್ನು ರಿಸರ್ವ್ ಫಂಡಿನಿಂದ ವಜಾ ಹಾಕಿ ಉಳಿದದ್ದು ಹೆಚ್ಚು ಮೆಂಬರುಗಳೂ ಮತ್ತು ರಿಜಿಸ್ಟ್ರಾರವರೂ ಒಪ್ಪಿದ ಧರ್ಮ ಕೆಲಸಕ್ಕೆ ಉಪಯೋಗಿಸಲ್ಪಡುವದು.

೫೮ ~~೫೩.~~ ಈ ಸಂಘಕ್ಕೂ, ಇದರ ಮೆಂಬರುಗಳಿಗೂ, ಡಿಪಾಜಿಟ್ದಾರರಿಗೂ, ಇತರ ಸಂಘಗಳಿಗೂ ಬೇರೆ ಜನರಿಗೂ ನಡೆಯುವ ಆದಾಯಗಳ ವಿಷಯವಾಗಿಯೂ, ಲೇವಾದೇವಿಗಳ ವಿಷಯವಾಗಿಯೂ ಉಂಟಾಗಬಹುದಾದ ದಾವೆ, ವಿವಾದ ಮುಂತಾದ ವ್ಯಾಜ್ಯಗಳು ರಿಜಿಸ್ಟ್ರಾರವರಲ್ಲಿ ದಾಖಲಾಗತಕ್ಕದ್ದು. ಅವರ ತೀರ್ಪುಗಳನ್ನು, ಡಿಕ್ರಿಗಳನ್ನು ಡೆಪ್ಯುಟಿ ಕಮಿಷನರುಗಳು ಕಂದಾಯದ ಬಾಕಿಯಂತೆ ಮೊಬಲಗು ವಸೂಲ್ ಮಾಡಿ ಜಾರಿ ಮಾಡಬಹುದು. ~~ರಿಜಿಸ್ಟ್ರಾರವರ ಅವಾರ್ಡ್ ವಾ ಡಿಕ್ರಿಯಂತೆಯೇ ಸಿವಿಲ್ ಕೋರ್ಟಿನ ಅವಾರ್ಡ್ ವಾ ಡಿಕ್ರಿಯ ಜಾರಿಯಂತೆ ಬಂದು ತೀರ್ಮಾನಿಗೆ ಒಪ್ಪಿಸಿ ಮಾಡಬಹುದು.~~ — ಈ ದಾವೆ, ವಿವಾದ, ವ್ಯಾಜ್ಯ ಮತ್ತು ಅವುಗಳ ಮೇಲಿನ ವಿಷಯಗಳಲ್ಲಿ ಸಿವಿಲ್ ಕೋರ್ಟುಗಳಿಗೆ ವಿಚಾರಿಸುವ ಮತ್ತು ತೀರ್ಮಾನಮಾಡುವ ಅಧಿಕಾರವಿರುವುದಿಲ್ಲ

ದಾವೆ, ವಿವಾದ ಮುಂತಾದ ವ್ಯಾಜ್ಯಗಳು

೫೯ ~~೫೪~~ ರಿಜಿಸ್ಟ್ರಾರವರ ಅಪ್ಪಣೆ ಪಡೆದು ಈ ಸೊಸೈಟಿಯು ಸೆಂಟ್ರಲ್ ಪ್ರಾವಿನ್ಶಿಯಲ್ ಕೋ ಆಪರೇಟಿವ್ ಬ್ಯಾಂಕ್ ಮತ್ತು ಡಿಸ್ಟ್ರಿಕ್ಟ್ ಕೋ ಆಪರೇಟಿವ್ ಬ್ಯಾಂಕುಗಳಲ್ಲಿ ಒಂದೊಂದು ಷೇರನ್ನಾದರೂ ಪಡೆಯಬೇಕು.

ಸೆಂಟ್ರಲ್ ಬ್ಯಾಂಕ್

55 ರಿಜಿಸ್ಟ್ರಾರವರು ವಿಧಿಸುವ ನಮೂನೆಗಳಲ್ಲಿ ಸೊಸೈಟಿಯು ಲೆಕ್ಕಗಳನ್ನು ಇಡತಕ್ಕದ್ದು. ಪಂಚಾಯಿತರ ಮತ್ತು ಜನರಲ್ ಮೀಟಿಂಗ್ ನಡವಳಿಕೆಗಳ ಕಾಪಿಗಳನ್ನು ಮತ್ತು ರಿಜಿಸ್ಟ್ರಾರವರು ಅಪೇಕ್ಷಿಸುವ ಮಾಹಿತಿ ಪಟ್ಟಿ ಲೆಕ್ಕಗಳ ಕಾಪಿಗಳನ್ನು ಅವರು ವಿಧಿಸುವ ಕಾಲಕ್ಕೆ ಸರಿಯಾಗಿ ಕಳುಹಿಸುತ್ತಾ ಬರಬೇಕು.

ಲೆಕ್ಕ ಪತ್ರಗಳು.

56 ಮೇಲ್ಕಂಡ ಬೈಲಾಗಳು 1905ನೆ ಇಸವಿ VII ನೆ ನಂಬರ್ ಕೋ ಆಪರೇಟಿವ್ ಸೊಸೈಟಿಗಳ ಕಾನೂನು ಮತ್ತು ಕೋ ಆಪರೇಟಿವ್ ರೂಲ್ಸಿಗೆ ಅನುಸಾರವಾಗಿ ಮಾಡಲ್ಪಟ್ಟಿರುತ್ತವೆ ಕಾಲಕ್ರಮೇಣ ಈ ಬೈಲಾಗಳಲ್ಲಿ ಬದಲಾವಣೆ ಮಾಡತಕ್ಕದ್ದು —

ಬೈಲಾ ಬದಲಾವಣೆ

SHIMOGA HOUSE BUILDING CO-OPERATIVE SOCIETY LTD. SHIMOGA.

Registered No. 4 R. S. 182.

THE

Shimoga House Building Co operative Society, (Ltd)

SHIMOGA.

BY-LAWS.

ತಾರೀಖು 2 11 1924

೬

ಶಿವಮೊಗ್ಗಾ ಡಿಸ್ಟ್ರಿಕ್ಟ್, ಶಿವಮೊಗ್ಗಾ ತಾಲ್ಲೂಕು, ಶಿವಮೊಗ್ಗಾ ಹೌಸ್-ಬಿಲ್ಡಿಂಗ್ (ಮನೆ ಕಟ್ಟುವ) ಕೋ-ಆಪರೇಟಿವ್ ಸೊಸೈಟಿ, (ಲಿಮಿಟೆಡ್) ಯೆಂಬ ಮಿತವಾದ ಜವಾಬ್ದಾರಿಯುಳ್ಳ ಪರಸ್ಪರ ಸಹಾಯ ಸಂಘದ ಬೈಲಾಗಳು

ಹೆಸರು.

1 ಈ ಸೊಸೈಟಿಗೆ ಶಿವಮೊಗ್ಗಾ ಹೌಸ್ ಬಿಲ್ಡಿಂಗ್ (ಮನೆ ಕಟ್ಟುವ) ಲಿಮಿಟೆಡ್ ಕೋ-ಆಪರೇಟಿವ್ ಸೊಸೈಟಿ ಯೆಂಬ ಮಿತವಾದ ಜವಾಬ್ದಾರಿಯುಳ್ಳ ಪರಸ್ಪರ ಸಹಾಯ ಸಂಘ ಎಂದು ಹೆಸರು.

ವಿಳಾಸ.

2. ಇದರ ವಿಳಾಸ ಶಿವಮೊಗ್ಗಾ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ, (ಲಿಮಿಟೆಡ್) ತಾಲ್ಲೂಕು ಶಿವಮೊಗ್ಗಾ, ಗ್ರಾಮ ಶಿವಮೊಗ್ಗಾ ಪೋಸ್ಟಾಫೀಸು ಶಿವಮೊಗ್ಗಾ

ಅಧಿಕಾರ

3 ಈ ಸೊಸೈಟಿಗಳ ಅಧಿಕಾರವು ಶಿವಮೊಗ್ಗಾ ಟೌನ್ ಮುನಿಸಿಪಲ್ ಸರಹದ್ದಿನೊಳಗೆ ಇರುವ ಪ್ರದೇಶಕ್ಕೆ ಮಾತ್ರ ವ್ಯಾಪಿಸಿರತಕ್ಕದ್ದು

4. ಈ ಸೊಸೈಟಿಯ ಉದ್ದೇಶಗಳು ಏನೆಂದರೆ —

ಉದ್ದೇಶ

(i) ಮೆಂಬರುಗಳಲ್ಲಿ ತಮ್ಮ ಆದಾಯದ ಸ್ವಲ್ಪ ಸ್ವಲ್ಪ ಉಳಿಸುವುದನ್ನೂ ಮತ್ತು ಮಿತವ್ಯಯ ಬುದ್ಧಿಯನ್ನೂ ಅನ್ಯೋನ್ಯ ಸಹಾಯ ಗುಣವನ್ನೂ ಅಭಿವೃದ್ಧಿಗೊಳಿಸುವುದು.

(ii) (1) ಶಿವಮೊಗ್ಗಾ ಟೌನಿನಲ್ಲಿ ತುಂಗಾನದಿ ಪ್ರವಾಹದ ಅಪಾಯದಿಂದ ವಾಸಸ್ಥಳವಿಲ್ಲದೆ ಕಷ್ಟಪಡುವವರಿಗೆ ತೊಂದರೆ ನಿವಾರಣೆ ಬಗ್ಗೆ ಬಂಡವಾಳವನ್ನು ಒದಗಿಸಿಕೊಂಡು ಮೆಂಬರುಗಳಿಗೆ ಮನೆ ಕಟ್ಟುವುದಕ್ಕೆ ಸಾಲ ಕೊಡುವುದು. [illegible]

(2) [illegible]

(3) ~~ಮನೆ ಕಟ್ಟುವ ಸಾಮಗ್ರಿಗಳನ್ನು [illegible] ಕೊಡುವುದು.~~ [illegible]

(ii) ನಿವೇಶನಗಳನ್ನು ಪಡೆದು ಮನೆಗಳನ್ನು ಕಟ್ಟಿಸಿ ಅಥವಾ ಮನೆಗಳನ್ನು ಕೊಂಡುಕೊಂಡು ಮೆಂಬರುಗಳಿಗೆ ಬಾಡಿಗೆ ಅಥವಾ ಕೊಂಡುಕೊಳ್ಳುವ ಏರ್ಪಾಡು ಮಾಡುವುದು

(iii) ರಿಜಿಸ್ಟ್ರಾರವರ ಅನುಮತಿಯಿಂದ ಸೊಸೈಟಿಯುವರು ತೀರ್ಮಾನಿಸುವುದಾದ ಇತರ ಉದ್ದೇಶಗಳು

5 ಜವಾಬ್ದಾರಿ — ಸೊಸೈಟಿಗೆ ಹೊರಗಿನಿಂದ ತರತಕ್ಕ ಸಾಲಗಳಿಗೂ, ಡಿಪಾಜಿಟ್ಟುಗಳಿಗೂ ಸೊಸೈಟಿಯು ಒತ್ತಾಸೆಯಿಂದ ಹೊಸದಾಗಿ ಕಟ್ಟಿಸಿ ಕೊಡಲ್ಪಡುವ ಮನೆಗಳು ಆಧಾರವಾಗಿರುವುದಲ್ಲದೆ ಮೆಂಬರುಗಳೆಲ್ಲರೂ ಅವರವರು ಪಡೆದಿರುವ ಷೇರುಗಳ ಒಟ್ಟು ಬೆಲೆಯಷ್ಟು ಜವಾಬ್ದಾರರಾಗಿರುತ್ತಾರೆ.

6 ಷೇರುಗಳು — ಈ ಸೊಸೈಟಿಯಲ್ಲಿ ಐವತ್ತು (50) ರೂಪಾಯಿನ ಎರಡು ಸಾವಿರ (2000) ಷೇರುಗಳಿರತಕ್ಕದ್ದು

7 ಮೆಂಬರಾಗುವ ಬಗೆ — ಹದಿನೆಂಟು ವರುಷಕ್ಕೆ ಮೇಲ್ಪಟ್ಟ 3 ನೆ ಬೈಲಾದಲ್ಲಿ ಕಂಡ ಪ್ರದೇಶದಲ್ಲಿ ಪ್ರವಾಹದ ಅಪಾಯಕರ ದೆಸೆಯಿಂದ ಮನೆ ಹೋಗಿ ಹೊಸದಾಗಿ ಮನೆ ಕಟ್ಟತಕ್ಕವರು ಮತ್ತು ಪ್ರವಾಹದ ಅಪಾಯಕರದ ದೆಸೆಯಿಂದ ನಿವಾರಣೆ ಬಗ್ಗೆ ಮುನಿಸಿಪಾಲಿಟಿಯಿಂದ ಹೊಸದಾಗಿ ಕೊಡಲ್ಪಡುವ ಮನೆ ನಿವೇಶನಗಳನ್ನು ಪಡೆದಿರುವವರು ಮತ್ತು ಪಡೆಯುವವರು ಮತ್ತು ಬೇರೆ ಯಾವುದೇ ಸ್ಥಳಗಳಲ್ಲಿ ಮನೆ ನಿವೇಶನಗಳುಳ್ಳವರು ಮಾತ್ರ ಯೋಗ್ಯರಾದ ಪಕ್ಷದಲ್ಲಿ ಸೊಸೈಟಿಗೆ ಮೆಂಬರಾಗಲು ಅರ್ಹರಾಗಿರುತ್ತಾರೆ ಆದರೆ ಮೇಲ್ಕಂಡ ನಿಬಂಧನೆಗಳಿಗೆ ಒಳಪಡದೆ ಇದ್ದರೂ, ಈ ಸೊಸೈಟಿಯು ಏಳಿಗೆಯಲ್ಲಿ ಉತ್ಸಾಹಶಾಲಿಗಳಾಗಿರತಕ್ಕ ಹನ್ನೆರಡು ಜನರನ್ನು ರಿಜಿಸ್ಟ್ರಾರವರ ಅನುಮತಿ ಪಡೆದು ಮೆಂಬರನ್ನಾಗಿ ಸೇರಿಸಿಕೊಳ್ಳಬಹುದು. ಮೆಂಬರುಗಳಿಗೆ ಬರುವ ದರಖಾಸ್ತುಗಳನ್ನು ಮಂಜೂರು ಮಾಡುವುದಕ್ಕೂ ಅಥವಾ ತಿರಸ್ಕರಿಸುವುದಕ್ಕೂ ಪಂಚಾಯತದಾರರು ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತಾರೆ

8. (1) ರಿಜಿಸ್ಟ್ರೇಷನ್‌ಗೋಸ್ಕರ ದರಖಾಸ್ತಿಗೆ ರುಜು ಮಾಡುವವರು ಬೈಲಾ ಪ್ರಕಾರ ಪ್ರವೇಶಧನ, ಷೇರು ಫೀ ಮತ್ತು ಷೇರು ಮೊಬಲಗು ಕೊಟ್ಟನಂತರ ಈ ಬೈಲಾಗಳಿಗೆ ಒಳಪಟ್ಟು ಮೆಂಬರಾಗುತ್ತಾರೆ.

(೫) ಈ ನಿಬಂಧನೆಗಳನ್ನನುಸರಿಸಿ ಅರ್ಜಿದಾರರು ಮೆಂಬರಾಗಿ ಸೇರಿಸಲ್ಪಡುವಂಥವರೂ ಮೆಂಬರಾಗುತ್ತಾರೆ. ಹೀಗೆ ಮೆಂಬರಾಗಲು ಅಪೇಕ್ಷಿಸುವ ಪ್ರತಿ ಒಬ್ಬ ಮನುಷ್ಯನೂ ಪಂಚಾಯತರು ವಿಧಿಸುವ ಪ್ರಮಾಣದಲ್ಲಿ ಮೆಂಬರುಗಳಿಗೆ ದರಖಾಸ್ತು ಕೊಟ್ಟು, ಮೆಂಬರಾಗಲು ಎಂಟ್ರನ್ಸ್ ಪ್ರವೇಶಧನವನ್ನೂ ಮತ್ತು ದರಖಾಸ್ತಿನಲ್ಲಿ ನಮೂದಿಸುವ ಷೇರುಗಳಿಗೆ ಷೇರು ಒಂದಕ್ಕೆ ಎರಡಾಣೆಯಂತೆ ಆಗುವ ಷೇರು ಫೀಜನ್ನೂ ಮತ್ತು ಷೇರು ಒಂದಕ್ಕೆ ಮೂರು ರೂಪಾಯಿಗಳಿಗೆ ಕಮ್ಮಿ ಇಲ್ಲದಂತೆ ಮೊದಲನೆ ಕಂತಿನ ಹಣದೊಂದಿಗೆ ಸೆಕ್ರೆಟರಿಯವರಲ್ಲಿ ದಾಖಲ್ಮಾಡತಕ್ಕದ್ದು. ದರಖಾಸ್ತು ಮಂಜೂರಾಗದಿದ್ದರೆ ದರಖಾಸ್ತಿನೊಂದಿಗೆ ಕೊಡಲ್ಪಟ್ಟ ಹಣವೆಲ್ಲಾ ವಾಪಸ್ಸು ಕೊಡಲ್ಪಡುವುದು. ದರಖಾಸ್ತು ಮಂಜೂರಾದಲ್ಲಿ ಮೆಂಬರುಗಳ ರಿಜಿಸ್ಟರಿಗೆ ದಾಖಲಾಗಿ ಮೆಂಬರಾಗುವನು.

೬. ಪ್ರತಿ ಒಬ್ಬ ಮೆಂಬರೂ ಕನಿಷ್ಠಪಕ್ಷ ಒಂದು ಷೇರನ್ನಾದರೂ ತೆಗೆದುಕೊಳ್ಳಬೇಕು. ಇಪ್ಪತ್ತು ಷೇರುಗಳಿಗಿಂತ ಜಾಸ್ತಿಯಾಗಿ ಯಾರಿಗೂ ಕೊಡಕೂಡದು. ಪ್ರತಿ

ಮೆಂಬರಿನ ಕರ್ತವ್ಯ.

ಷೇರಿಗೂ ಸದ್ಯಕ್ಕೆ ಇಪತ್ತೈದು ರೂಪಾಯಿಗಳು ಮಾತ್ರ ವಸೂಲಾಗತಕ್ಕದ್ದು. ಬಾಕಿ ಇಪ್ಪತ್ತೈದು ರೂಪಾಯಿಗಳು ರಿಜರ್ವ್ ಜವಾಬ್ದಾರಿಯಾಗಿ (Reserve Liability) ನಿಂತಿರತಕ್ಕದ್ದು. ಷೇರು ಧನಕ್ಕಾಗಿ ಪ್ರತಿ ಒಂದು ತಿಂಗಳಲ್ಲಿಯೂ ಹದಿನೈದನೆ ತಾರೀಖಿನೊಳಗಾಗಿ ಷೇರು ಒಂದಕ್ಕೆ ಎರಡು ರೂಪಾಯಿಗಳಿಗೆ ಕಮ್ಮಿ ಇಲ್ಲದಂತೆ ಹನ್ನೊಂದು ತಿಂಗಳು ಕೊಡುತ್ತಾ ಬರಬೇಕು. ಈ ಮೊಬಲಗು ಪೂರ್ತಿಯಾಗಿ ಆಗಲಿ ಅಥವಾ ಕೆಲ ಕಂತುಗಳು ಮುಂಗಡವಾಗಿಯಾಗಲಿ ಮೊದಲೇ ಕೊಡಬಹುದು. ಹೀಗೆ ಪ್ರತಿ ಮಾಹೆಯಲ್ಲಿಯೂ ಕೊಡುವ ಮೊಬಲಗು ಒಟ್ಟಿನಲ್ಲಿ ಇಪ್ಪತ್ತೈದು ರೂಪಾಯಿ ಆದ ಒಡನೆಯೆ ಹಾಗೆ ಒಟ್ಟಾದ ಪ್ರತಿ ಇಪ್ಪತ್ತೈದು ರೂಪಾಯಿಗಳಿಗೂ ಒಂದು ಷೇರು ಪೂರ್ತಿಯಾಯಿತೆಂದು ಭಾವಿಸತಕ್ಕದ್ದು. ಷೇರು ಕಂತುಗಳು ಸಕಾಲಕ್ಕೆ ಬರದಿದ್ದರೆ ಹೀಗೆ ನಿಂತ ಕಂತುಗಳಿಗೆ ಪಂಚಾಯತರಿಗೆ ಸರಿತೋರಿದಂತೆ ಸುಸ್ತಿ ಬಡ್ಡಿಯನ್ನು ವಿಧಿಸಬಹುದು. ಆದರೆ ಮೂರು ತಿಂಗಳಿಗಿಂತ ಹೆಚ್ಚಾಗಿ ಷೇರು ಕಂತುಗಳನ್ನು ಯಾವ ಮೆಂಬರೇ ಆಗಲಿ ನಿಲ್ಲಿಸಿಕೊಂಡಲ್ಲಿ ಆ ಷೇರುಗಳನ್ನು ಆ ಮೆಂಬರಿನ ಹೆಸರಿನಿಂದ ವಜಾಮಾಡಿ ಇತರರಿಗೆ ವಿಲೆ ಮಾಡಲಿಕ್ಕೆ ಪಂಚಾಯತರಿಗೆ ಸಂಪೂರ್ಣಾಧಿಕಾರವಿರುತ್ತೆ. ಷೇರುಗಳಮೇಲೆ ವಸೂಲಾದ ಸುಸ್ತಿ ಬಡ್ಡಿಯನ್ನು ರಿಜರ್ವ್ ಫಂಡಿಗೆ ಸೇರಿಸತಕ್ಕದ್ದು.

10 ಸೊಸೈಟಿಯಿಂದ ಪಡೆದಿರುವ ಸಾಲವನ್ನು ಪೂರ್ತಾ ತೀರಿಸುವವರೆಗೂ ಮೆಂಬರು ತನವನ್ನು ಬಿಡಲು ಯಾವ ಮೆಂಬರಿಗೂ ಅಧಿಕಾರ ಇರುವುದಿಲ್ಲ. ಹಾಗೆ ಬಿಡುವುದಕ್ಕೆ ಮೊದಲೇ ತನ್ನ ಸ್ವಂತ ಸಾಲಗಳನ್ನೂ ಮತ್ತು ತನ್ನ ಜಂಟಿ ಮೇಲೆ ಇತರರಿಗೆ ಕೊಡಿಸಿರುವ ಸಾಲಗಳನ್ನೂ ಸಹ ಸೊಸೈಟಿಗೆ ಸಲ್ಲಿಸಿ ಲಿಖಿತ ಮೂಲಕ ಪಂಚಾಯಿತರಿಗೆ ತಿಳಿಸಬೇಕು.

ಮೆಂಬರುತನ ತಪ್ಪುವಿಕೆ

11 ಪಂಚಾಯಿತರು ಈ ಕೆಳಗೆ ನಮೂದಿಸುವ ಕಾರಣಗಳಿಗಾಗಿ ಮೆಂಬರನ್ನು ವಜಾ ಮಾಡಬಹುದು:—

(1) ಸಾಲ ತೀರಿಸದೆ ಹೋಗುವುದು.

(2) ಸಾಲದ ವಾಯಿದೆ ಮೀರಿ ಹೆಚ್ಚು ವಾಯಿದೆ ಪಡೆಯದೆ ಇರುವುದು.

(3) ಸಾಲ ಪಡೆದ ಉದ್ದೇಶಕ್ಕೆ ಅಲ್ಲದೆ ಬೇರೆ ಕೆಲಸಕ್ಕೆ ಸಾಲದ ಮೊಬಲಗನ್ನು ಉಪಯೋಗಿಸಿಕೊಳ್ಳುವುದು

(4) ಹುಚ್ಚನಾಗುವುದು, ದಿವಾಳಿಯಾಗುವುದು, ಸೊಸೈಟಿಗೆ ಅಗೌರವವಾದ್ದ ರೀತಿಯಲ್ಲಿ ನಡೆದುಕೊಳ್ಳುವುದು ಮತ್ತು ಪಂಚಾಯಿತರಿಗೆ ತೋರಿಬರುವ ಇತರ ದುರ್ನಡತೆಗಳು

12 ಫನತಿ ಆದರೆ ಮೆಂಬರುತನವು ತಪ್ಪಿಹೋಗುವುದು.

13 (a) ಮೆಂಬರುತನ ತಪ್ಪಿಹೋದವನ ವಿಷಯದಲ್ಲಿ ಬೇರೆ ರೂಲಿನಲ್ಲಿ ಕಂಡ ಜವಾಬ್ದಾರಿಯು ಮೆಂಬರುತನ ತಪ್ಪಿಹೋದ ತಾರೀಖಿನ ಲಾಗಾಯತು 24 ತಿಂಗಳ ವರೆಗೆ ಇರುತ್ತೆ

ಬಿಟ್ಟು ಹೋದ ಮೆಂಬರಿನ ಜವಾಬ್ದಾರಿ.

(b) ಹಾಗೆಯೇ ಫನತಿಪಟ್ಟವನ ಆಸ್ತಿ ವಿಷಯದಲ್ಲಿಯೂ ಸಹ ಮೇಲ್ಕಂಡ ಜವಾಬ್ದಾರಿಯು ಫನತಿ ತಾರೀಖು ಲಾಗಾಯತು 12 ತಿಂಗಳವರೆಗೆ ಇರುತ್ತೆ

14. ಮೆಂಬರುತನ ತಪ್ಪಿಹೋದವರಿಂದ ಬರಬೇಕಾದ ಸಾಲವನ್ನು ವಾಯಿದೆ ಲಕ್ಷ್ಯಿಸದೆ ಪಂಚಾಯಿತರು ತಕ್ಷಣ ವಸೂಲುಮಾಡಿಕೊಳ್ಳಬೇಕು. ಮೆಂಬರುತನ ತಪ್ಪಿದಾಗ ಹಿಸ್ಸೆ ಹಂಚಲ್ಪಡದ ಲಾಭಕ್ಕೆ ಅವನು ಬಾಧ್ಯನಾಗುವುದಿಲ್ಲ.

ಮೆಂಬರು ತನ ತಪ್ಪಿದವನ ಅವಕಾಶ.

15 ಮೃತಿಯಾದರೂ, ಮೆಂಬರುತನ ತಪ್ಪಿಹೋದರೂ, ಆ ಮೆಂಬರನ ಲೆಕ್ಕವನ್ನು ಒಂದು ತಿಂಗಳೊಳಗಾಗಿ ಪಂಚಾಯಿತರು ತೀರ್ಮಾನಿಸತಕ್ಕದ್ದು. ಅವನಿಗೆ ಹಣ ಸಲ್ಲಬೇಕಾದಪಕ್ಷದಲ್ಲಿ ಆ ಮೊಬಲಗನ್ನು ಸೊಸೈಟಿಯಲ್ಲಿ ಅವನ ಹೆಸರಿನಲ್ಲಿ ಜಾಸ್ತಿ ಡಿಪಾಜಿಟ್ಟಾಗಿಟ್ಟುಕೊಂಡು ಅವನಿಗಾಗಲಿ, ಅವನ ವಾರೀಸುದಾರರಿಗಾಗಲಿ, ನಾಮಿನಿಗಾಗಲಿ ನೋಟೀಸು ಕೊಟ್ಟು ಪಾವತಿ ಮಾಡತಕ್ಕದ್ದು. ಅವನಿಂದ ಸೊಸೈಟಿಗೆ ಹಣ ಸಲ್ಲಬೇಕಾದಪಕ್ಷದಲ್ಲಿ ಬಾಕಿಯಾಗುವ ಮೊಬಲಗಿಗೆ ಒಂದು ವಾಯಿದೆಯೊಂದ ಲಿಖಿತ ಮೂಲಕ ನೋಟೀಸು ವಗೈರೆ ತಗಾದೆಯನ್ನು ಬಾಕಿದಾರನಿಗೆ ಅಥವಾ ಮೃತಿಯಾದವನ ವಾರೀಸುದಾರರಿಗೆ ಕೊಡಬೇಕು. ನೋಟೀಸಿನಲ್ಲಿ ಕಂಡ ವಾಯಿದೆಯೊಳಗಾಗಿ ಬಾಕಿ ವಸೂಲಾಗದೆ ಹೋದಪಕ್ಷದಲ್ಲಿ ಪಂಚಾಯಿತರು ವಸೂಲಿ ಕಂದಾಯದು ನಡೆಸಬೇಕು. ನೋಟೀಸಿನ ವಾಯಿದೆ ಪೂರೈಸಿದ ತಾರೀಖು ಲಾಗಾಯತು ವಸೂಲಾಗುವ ತಾರೀಖಿನವರಿವಿಗೆ ಬಾಕಿಯಾಗುವ ಮೊಬಲಗಿನಮೇಲೆ ರೂಪಾಯಿ ಒಂದಕ್ಕೆ ತಿಂಗಳಿಗೆ ೨ ಕಾಸಿನಂತೆ ಬಡ್ಡಿ ದಾಖಲ್ಮಾಡಬೇಕು. ಇಂಥಾ ಬಾಕಿದಾರನ ಮೇಲೆ ವಸೂಲಿ ಬಗ್ಗೆ ನಡೆಸುವ ದಾವಾ ವಗೈರೆ ನಡವಳಿಗೆ ಸೊಸೈಟಿಗೆ ತಗಲುವ ಖರ್ಚನ್ನೆಲ್ಲಾ ಸದರಿ ಬಾಕಿದಾರನಿಂದ ವಸೂಲ್ಮಾಡಿಕೊಳ್ಳಬೇಕು.

16. ಸೊಸೈಟಿಯ ಉದ್ದೇಶಗಳಿಗೆ ಉಪಯೋಗಿಸಲ್ಪಡುವ ಮೂಲಧನಕ್ಕೆ ಸೇರುವ ಬಾಬುಗಳು ಯಾವುವೆಂದರೆ —

ಮೂಲಧನ

(1) ಪ್ರವೇಶ ಧನ
(2) ಷೇರು ಫೀ
(3) ಷೇರು ಧನ.
(4) ಡಿಪಾಜಿಟ್ಟು ಮೊಬಲಗು.
(5) ಸೊಸೈಟಿಗೆ ಹೊರಗಿನಿಂದ ತರುವ ಸಾಲ.
(6) ಮೂಲಧನಕ್ಕೆಂದು ಸೇರಿಸಲ್ಪಡುವ ಇತರ ಹಣಗಳು.

17 **ಸಾಲ ತರುವುದು.** ಸಂಘದವರು ಆಗಿಂದಾಗ್ಗೆ ನಿರ್ಧರಿಸುವ ಪರಿಮಿತಿಗೆ ಒಳಪಟ್ಟು ರಿಜಿಸ್ಟ್ರಾರವರ ಅನುಮತಿ ಮೇಲೆ ಪಂಚಾಯಿತರು ಸೊಸೈಟಿಯ ಉಪಯೋಗಕ್ಕಾಗಿ ಹೊರಗಿನಿಂದ ಸಾಲವನ್ನು ತರಬಹುದು.

18 **ಡಿಪಾಜಿಟ್ಟುಗಳು.** ಪಂಚಾಯಿತರಿಗೆ ಸೂಕ್ತತೋರಿದಲ್ಲಿ ಮೆಂಬರುಗಳಿಂದಲಾಗಲೀ ಅಥವಾ ಇತರರಿಂದಲಾಗಲೀ ಡಿಪಾಜಿಟ್ಟುಗಳನ್ನು ತೆಗೆದುಕೊಳ್ಳಬಹುದು

19 ಡಿಪಾಜಿಟ್ಟುಗಳು:—

(i) ಫಿಕ್ಸೆಡ್ ಡಿಪಾಜಿಟ್

ಫಿಕ್ಸೆಡ್ ಡಿಪಾಜಿಟ್ ಅಂದರೆ ವಾಯಿದೆಯೊಳಗೆ ವಾಪಸ್ಸಾಗದೆ ಇರಬಹುದಾದ ಡಿಪಾಜಿಟ್ ಇದು 10 ರೂಪಾಯಿಗೆ ಕಡಿಮೆ ಇಲ್ಲದಂತೆಯೂ ಮೂರು ತಿಂಗಳ ವಾಯಿದೆಗೆ ಕಮ್ಮಿ ಇಲ್ಲದಂತೆಯೂ ತೆಗೆದುಕೊಳ್ಳತಕ್ಕದ್ದು

(ii) ಈ ಮೇಲ್ಕಂಡ ಡಿಪಾಜಿಟ್ಟಿನ ವಿಷಯದಲ್ಲಿ ಬಡ್ಡಿಯನ್ನೂ ಇತರ ವಿಷಯಗಳನ್ನೂ ಪಂಚಾಯಿತರು ಡಿಪಾಜಿಟ್ಟು ತೆಗೆದುಕೊಳ್ಳುವುದಕ್ಕೆ ಮುಂಚೆ ಒಳನಿಬಂಧನೆಗಳಿಂದ ನಿಷ್ಕರ್ಷೆ ಮಾಡಬೇಕು.

(iii) ಪಂಚಾಯಿತರು ಯಾವ ಕಾಲದಲ್ಲಾಗಲಿ ಡಿಪಾಜಿಟ್ಟುಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಬಹುದು,

(iv) ಸೊಸೈಟಿ ಮೆಂಬರಲ್ಲದವರಿಂದ ತೆಗೆದುಕೊಳ್ಳುವ ಡಿಪಾಜಿಟ್ಟು ಮೊಬಲಗು ಯಾವ ಕಾಲದಲ್ಲೂ ಮೆಂಬರುಗಳು ತೆಗೆದುಕೊಳ್ಳುವ ಒಟ್ಟು ಷೇರು ಬಂಡವಾಳದಲ್ಲಿ ಶೇಕಡಾ 80 ಕ್ಕಿಂತ ಹೆಚ್ಚಾಗಿರಕೂಡದು.

(v) ಡಿಪಾಜಿಟ್ಟುಗಳಮೇಲೆ ಕೊಡುವ ಬಡ್ಡಿ ಶೇಕಡಾ ಸಾಲಿಯಾನಾ 7 ಕ್ಕಿಂತ ಜಾಸ್ತಿಯಾಗಿರಕೂಡದು.

20 ಸಾಲವು ಮೆಂಬರುಗಳಿಗೆ ಮಾತ್ರ ಕೊಡಬಹುದು. ಸಾಲ ಪಡೆಯುವ ಮೆಂಬರಿಂದ ಸರಿಯಾದ ದಸ್ತೈವಜು ತೆಗೆದುಕೊಳ್ಳದೆ ಯಾವ ಸಾಲವನ್ನೂ ಕೊಡಕೂಡದು. ವಾಯಿದೆ ಪೂರೈಸುವುದರೊಳಗಾಗಿ ತಾನು ತೆಗೆದುಕೊಂಡಿರುವ ಸಾಲವನ್ನು ಮೆಂಬರು ವಾಪಸ್ ಮಾಡಿದಲ್ಲಿ ಪಂಚಾಯಿತರು ಮಾಡಿಕೊಳ್ಳುವ ಒಳನಿಬಂಧನೆಗಳಿಗನುಸಾರವಾಗಿ ಮೆಂಬರಿಂದ ಪಡೆದಿರುವ ಬಡ್ಡಿಯನ್ನು ವಾಪಸ್ ಕೊಡಬಹುದು. ವಾಯಿದೆಗೆ ಸರಿಯಾಗಿ ಸಾಲವನ್ನು ತೀರಿಸದಿದ್ದಲ್ಲಿ ಪಂಚಾಯಿತರು ಮಾಡಿಕೊಳ್ಳುವ ಒಳ ನಿಬಂಧನೆಗಳಿಗನುಸಾರವಾಗಿ ಸುಸ್ತುಬಡ್ಡಿ ದಾಖಲ್ಮಾಡಿ ಮುಂದಿನ ಕ್ರಮ ಜರುಗಿಸಬೇಕು. ಹೀಗೆ ವಸೂಲಾದ ಸುಸ್ತು ಬಡ್ಡಿಯನ್ನು ರಿಜರ್ವ್ ಫಂಡಿಗೆ ಸೇರಿಸತಕ್ಕದ್ದು.

ಸಾಲ ಕೊಡುವುದು ಮೆಂಬರಿಗೆ ಮಾತ್ರ

21 ಸಾಲಗಳನ್ನು ಏಳನೇ ಬೈಲಾದಲ್ಲಿ ಕಂಡ ನಿವೇಶನಗಳನ್ನು ಪಡೆಕೊಂಡು ಮನೆ ಕಟ್ಟಿಸುವುದು, ಸದರಿ ನಿವೇಶನಗಳಲ್ಲಿ ಕಟ್ಟಿದ ಮನೆಗಳನ್ನು ಕೊಂಡುಕೊಳ್ಳುವುದು ಮತ್ತು ಅಂಥಾ ಮನೆಗಳಿಗೆ ರಿಪೇರಿ ಮಾಡುವುದು ಈ ಉದ್ದೇಶಗಳಿಗೆ ಮಾತ್ರವೇ ಕೊಡಬೇಕು.

ಸಾಲದ ಉದ್ದೇಶ.

22 ಯಾವುದಾದರೂ ಒಂದು ಉದ್ದೇಶಕ್ಕಾಗಿ ಪಡೆದ ಸಾಲವು ಆ ಉದ್ದೇಶಕ್ಕಲ್ಲದೆ ಇತರ ವಿಧದಲ್ಲಿ ಉಪಯೋಗಿಸಲ್ಪಟ್ಟಿರುತ್ತೆಂದು ಪಂಚಾಯಿತರು ಅಭಿಪ್ರಾಯಪಟ್ಟರೆ ಸದರಿ ಸಾಲದ ಮೊಬಲಗನ್ನು ತಕ್ಷಣ ವಸೂಲ್ಮಾಡಲು ಸಲುವಳಿಕೆ ನಡಿಸಬೇಕು

23 ಸೊಸೈಟಿಯಿಂದ ಕಟ್ಟಿಸಲ್ಪಡುವ ಮನೆಗಳು ಈ ಕೆಳಗೆ ಕಂಡ ಮೂರು ವಿಧವಾದ ಪ್ಲಾನುಗಳಿಗೆ ಅನುಸಾರವಾಗಿರತಕ್ಕದ್ದು

(a) ನಾಲ್ಕು ನೂರು ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗದ ಮನೆಗಳು
(b) ಎಂಟು ನೂರು ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗದ ಮನೆಗಳು.
(c) ಒಂದು ಸಾವಿರದ ಇನ್ನೂರು ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗದ ಮನೆಗಳು.

ಯಾವ ಮೆಂಬರೇ ಆಗಲಿ ಒಂದು ಕಾಲದಲ್ಲಿ ಒಂದು ಸಾವಿರದ ಇನ್ನೂರು ರೂಪಾಯಿಗಳಿಗೆ ಮೇಲ್ಪಟ್ಟು ಸಾಲವನ್ನು ಪಡೆದಿರಕೂಡದು.

ಮನೆ ಕಟ್ಟುವುದಕ್ಕೆ ಕೊಡಲ್ಪಡುವ ಸಾಲಗಳು ಒಟ್ಟಾಗಿ ಒಂದೇ ಗಂಟಿನಲ್ಲಿ ಕೊಡಲ್ಪಡಲಾಗದು. ಕಟ್ಟಡದ ಕೆಲಸಕ್ಕನುಸಾರವಾಗಿ ಪಂಚಾಯಿತರು ಗೊತ್ತು ಮಾಡುವ ಕಂತುಗಳಲ್ಲಿ ಸಾಲಗಳನ್ನು ಕೊಡಬೇಕು.

ಈ ರೀತಿ ಕೊಡಲ್ಪಡುವ ಕಂತುಗಳಿಗೆ ಅದು ಪಾವತಿಯಾದ ತಾರೀಖಿನಿಂದ ಮಾತ್ರ ಬಡ್ಡಿ ವಿಧಿಸಲ್ಪಡುತ್ತೆ

24 ಮನೆ ಕಟ್ಟಿಸುವುದಕ್ಕೆ ಅಥವಾ ಸೊಸೈಟಿಯಿಂದ ಕಟ್ಟಲ್ಪಟ್ಟ ಮನೆಗಳನ್ನು ಕೊಂಡುಕೊಳ್ಳಲು ಪಡೆಯುವ ಸಾಲಗಳು ಸಾಧಾರಣವಾಗಿ ಹತ್ತು ವರ್ಷಗಳಲ್ಲಿ ಪಂಚಾಯಿತರು ಗೊತ್ತುಮಾಡುವ ಮಾಸೆಯಾನಾ ಕಂತುಗಳ ಪ್ರಕಾರ ತೀರಿಸಲ್ಪಡತಕ್ಕದ್ದು ಆದರೆ ಯಾವ ಮೆಂಬರೇ ಆಗಲಿ ಇಷ್ಟಪಟ್ಟಲ್ಲಿ ಮೇಲೆ ಕಂಡ ವಾಯಿದೆಗೆ ಮುಂಚಿತವಾಗಿಯೆ ಸಾಲವನ್ನು ಪೂರಾ ತೀರಿಸಬಹುದು

ಸಾಲ ಪೂರ್ತಿಯಾಗಿ ತೀರಿಸುವವರೆಗೂ ಕಟ್ಟಿಸಲ್ಪಡುವ ಮನೆಗಳು ನಿವೇಶನ ಸಹಿತವಾಗಿ ಸೊಸೈಟಿಯ ಸ್ವಾಧೀನದಲ್ಲೇ ಇರತಕ್ಕದ್ದು ಅದುವರೆವಿಗೂ ಮೆಂಬರಿಗೆ ಅವುಗಳನ್ನು ಯಾವ ವಿಧವಾದ ಪರಭಾರೆ ಮಾಡಲು ಅಧಿಕಾರವಿರುವುದಿಲ್ಲ

ಸಾಲ ಬೇಬಾಕಾದ ನಂತರ ಮನೆಯು ಮತ್ತು ನಿವೇಶನವು ಮೆಂಬರಿನ ಸ್ವಾಧೀನಕ್ಕೆ ಬಿಡಲ್ಪಡುವುದು. with amendment [illegible]

25 "ಸೊಸೈಟಿಯಿಂದ ಮೆಂಬರುಗಳಿಗೆ ಕೊಡತಕ್ಕ ಸಾಲದಮೇಲೆ ಶೇಕಡಾ ಸಾಲಿಯಾನಾ ಏಳಕ್ಕಿಂತ ಜಾಸ್ತಿಯಾಗಿ ಬಡ್ಡಿ ವಿಧಿಸಲ್ಪಡಕೂಡದು. ಬಡ್ಡಿಯನ್ನು ಲೆಕ್ಕ ಮಾಡುವಾಗ ಎಷ್ಟು ದಿವಸಗಳಿಗೆ ಸಾಲ ಕೊಡಲ್ಪಡುತ್ತದೆಯೋ ಅಷ್ಟು ದಿವಸಗಳಿಗೆ ಮಾತ್ರ ಲೆಕ್ಕ ಮಾಡಬೇಕು. ಚಕ್ರಬಡ್ಡಿಯನ್ನು ವಸೂಲ್ಮಾಡಕೂಡದು

ಸಾಲದ ಬಡ್ಡಿ ದರ.

26 ಸೊಸೈಟಿಯು ರಿಜಿಸ್ಟರಾದ ಒಡನೆಯೆ ಮೆಂಬರುಗಳೆಲ್ಲರೂ ಸೇರಿ ಮೀಟಿಂಗು ನಡಿಸಿ ಐದು ಜನಕ್ಕೆ ಕಡಿಮೆಯಿಲ್ಲದೆ ಹದಿನೈದು ಜನಕ್ಕೆ ಜಾಸ್ತಿಯಿಲ್ಲದೆ ಸೊಸೈಟಿಗೆ ಸೇರುವ ಮೆಂಬರುಗಳ ಪೈಕಿ ಪಂಚಾಯಿತರನ್ನು ಚುನಾಯಿಸಬೇಕು.

ಪಂಚಾಯಿತರು.

27 ಪ್ರತಿ ವರುಷವೂ ನಡೆಯುವ ಜನರಲ್ ಮೀಟಿಂಗಿನಲ್ಲಿ ಮೆಂಬರುಗಳು ಪಂಚಾಯತರನ್ನು ಹೊಸದಾಗಿ ತಮ್ಮಲ್ಲಿಯೇ ಚುನಾಯಿಸಬೇಕು. ಹಳಬರನ್ನು ಪುನಃ ಯಾವಂದರೂ ಚುನಾಯಿಸಬಹುದು.

28. ಪಂಚಾಯತರು ತಮ್ಮೊಳಗೆ ಒಬ್ಬರನ್ನು ಪ್ರೆಸಿಡೆಂಟ್ (ಯಜಮಾನ) ರನ್ನಾಗಿಯೂ ಮತ್ತೊಬ್ಬರನ್ನು ಸೆಕ್ರೆಟರಿಯವರನ್ನಾಗಿಯೂ ನೇಮಿಸಬೇಕು. ಅವಶ್ಯಕವಿದ್ದಲ್ಲಿ ಒಬ್ಬ ಟ್ರೆಜರರ್ ಮತ್ತು ಒಬ್ಬ ಜಾಯಿಂಟ್ ಸೆಕ್ರೆಟರಿಯವರನ್ನು ನೇಮಿಸಿಕೊಳ್ಳಬಹುದು.

29. ಪಂಚಾಯತರು ಎಷ್ಟು ಸಾರಿ ಅವಶ್ಯಕವಿದ್ದರೂ ಅಷ್ಟು ಸಾರಿ ಮೀಟಿಂಗು ನಡೆಸಬಹುದು. ಆದರೆ ಕನಿಷ್ಠ ಪಕ್ಷ ತಿಂಗಳಿಗೆ ಒಂದಾವರ್ತಿಯಾದರೂ ನಡೆಸಲೇಬೇಕು. ಇಂಥಾ ಮೀಟಿಂಗುಗಳಲ್ಲಿ ಐದುಜನ ಮೆಂಬರುಗಳು ಸೇರಿ ಕೋರಂ ಆಗತಕ್ಕದ್ದು. ಈ ಮೀಟಿಂಗಿಗೆ ಪ್ರೆಸಿಡೆಂಟರು ಬಾರದ ಪಕ್ಷದಲ್ಲಿ ಪಂಚಾಯತರು ತಮ್ಮಲ್ಲಿ ಒಬ್ಬರನ್ನು ಚೇರ್‌ಮನ್‌ರನ್ನಾಗಿ ಮಾಡಿಕೊಳ್ಳತಕ್ಕದ್ದು. ಪ್ರೆಸಿಡೆಂಟ್ ಅಥವಾ ಚೇರ್‌ಮನ್‌ರವರು ನಿರ್ಧಾರಕವಾದ (ಕ್ಯಾಸ್ಟಿಂಗ್ ವೋಟ್) ವೋಟನ್ನು ಹೊಂದಿರುವರು

30 ಪಂಚಾಯತರು ನಡೆಸಬೇಕಾದ ಕೆಲಸಗಳು ಯಾವುವೆಂದರೆ —

(1) ಮೆಂಬರಾಗುವುದಕ್ಕಾಗಿ ಬರುವ ದರಖಾಸ್ತುಗಳನ್ನು ಫೈಸಲ್ಮಾಡುವುದು

(2) ಫಿರ್ಯಾದು ಅಹವಾಲು ವಗೈರೆಗಳನ್ನು ವಿಚಾರಿಸಿ ಫೈಸಲ್ಮಾಡುವುದು.

(3) ಸಾಲಕ್ಕೆ ಮೆಂಬರುಗಳಿಂದ ಬರುವ ದರಖಾಸ್ತುಗಳನ್ನು ವಿಮರ್ಶೆಮಾಡಿ ರೂಲ್ಸ್ ಅನುಸಾರ ಫೈಸಲ್ಮಾಡುವುದು.

(4) 33 ನೇ ಬೈಲಾದಲ್ಲಿ ಕಂಡ ಮೂರು ವಿಧವಾದ ಮನೆಗಳಿಗೆ ಅಷ್ಟು ಪ್ಲಾನ್ ತಯಾರಿಸುವುದು

(5) [illegible]ಗಳನ್ನು ಪಡೆದು ಮನೆಗಳನ್ನು ಕಟ್ಟಿಸಿಕೊಡುವುದು ಮತ್ತು ಮನೆ ಕಟ್ಟುವ ಸಾಮಗ್ರಿಗಳನ್ನು ಒಟ್ಟಾಗಿ ತೆಗೆದುಕೊಂಡು ಮೆಂಬರುಗಳಿಗೆ ಒದಗಿಸಿಕೊಡುವುದು

(೬) ಸೊಸೈಟಿಯ ಸೆಕ್ರೆಟರಿಗಳ ಮೂಲಕ ಲೆಕ್ಕ ಪತ್ರಗಳನ್ನು ಇಡುವುದು ಮತ್ತು ಜಮಾ ಖರ್ಚು ನಡಿಸುವುದು

(೭) ಸೆಕ್ರೆಟರಿಗಳ ಮೂಲಕ ಸೊಸೈಟಿಯ ಕಿಟ್ಟುಂದಿಗೆ ಆವಶ್ಯಕವಾದ ಕೆಲಸಗಳನ್ನು ನೇಮಕ ಮಾಡುವುದು ಮತ್ತು ನೌಕರರನ್ನು ವಿಚಾರಿಸಿ ಮಾಡುವುದು, ನೌಕರರಿಗೆ ರಜಾ ಕೊಡುವುದು, ಜುಲ್ಮಾನೆ ಹಾಕುವುದು ಮತ್ತು ಅವರನ್ನು ಸಸ್ಪೆಂಡ್ ಮತ್ತು ಡಿಸ್‌ಮಿಸ್ ಮಾಡುವುದು

(೮) ಆರು ತಿಂಗಳಿಗೊಂದಾವರ್ತಿ (ಅಂದರೆ ಜನವರಿ 15 ನೇ ತಾರೀಖಿನೊಳಗೊಂದಾವರ್ತಿ ಜುಲೈ 15 ನೇ ತಾರೀಖಿನೊಳಗೊಂದಾವರ್ತಿ) ಸೊಸೈಟಿಯ ಆದಾಯ, ವೆಚ್ಚ, ಲಾಭ, ಡೆಡ್ ಸ್ಟಾಕ್ ತೋರಿಸುವ ಒಂದು ಬ್ಯಾಲೆನ್ಸ್ ಷೀಟನ್ನು ಅಂದರೆ ಥರ್ ಮಾತೆ ಆದಾಯ ವೆಚ್ಚದ ಪಟ್ಟಿ ತಯಾರ್ಮಾಡಿ ರಿಜಿಸ್ಟ್ರಾರವರಿಗೆ ಕಳುಹಿಸುವುದು, ಅವರು ಅದನ್ನು ಮಂಜೂರ್ಮಾಡಿದನಂತರ ಜನರಲ್ ಮೀಟಿಂಗ್ ಸಭೆಗೆ ಬಹಿರಂಗಪಡಿಸುವುದು.

(೯) ಆಗಾಗ್ಗೆ ಮೆಂಬರುಗಳ ಮೇಲೆ ನಿಂತಿರುವ ಬಾಕಿಗಳನ್ನು ಪರಿಶೋಧಿಸುವುದು ಮತ್ತು ಸಮರ್ಪಕ ಕಾರಣ ಇಲ್ಲದಾಗ್ಗೆ ಸದರಿ ಬಾಕಿಗಳನ್ನು ವಸೂಲ್ಮಾಡುವುದಕ್ಕೆ ತಕ್ಕ ವಿಚಾರಣೆ ಇಡುವುದು

(೧೦) ಸೊಸೈಟಿಯ ತನಿಖೆ ವೇಳೆಯಲ್ಲಿ ಲೆಕ್ಕ ಪತ್ರಗಳನ್ನು ಒದಗಿಸುವುದು.

(೧೧) ಈ ಬೈಲಾಗಳಿಗೆ ವಿರೋಧವಿಲ್ಲದಂತೆ ಉಪನಿಬಂಧನೆಗಳನ್ನು ತಯಾರು ಮಾಡುವುದು ಮತ್ತು ರಿಜಿಸ್ಟ್ರಾರವರ ಅನುಮತಿ ಪಡೆದು ಅವುಗಳನ್ನು ಜಾರಿಗೆ ತರುವುದು

(೧೨) ಸೊಸೈಟಿಯ ಮೆಂಬರುಗಳೆಲ್ಲಾ ಸೇರಿ ನಡೆಸತಕ್ಕದ್ದೆಂದು ಸ್ಪಷ್ಟವಾಗಿ ನಿಯಮಿಸಲ್ಪಡದೇ ಇರುವ ಸೊಸೈಟಿಯ ಸಂಬಂಧವಾದ ಮೇಲ್ವಿಚಾರಣೆಯನ್ನು ಮತ್ತು ಖಾಲ್ತಿ ಕೆಲಸಗಳನ್ನೂ ಮತ್ತು ಇತರ ಕೆಲಸಗಳನ್ನೂ ನಡಿಸುವುದು.

31. ಸೊಸೈಟಿ ತರಫ್ ಬರೆದುಕೊಳ್ಳುವ ದಸ್ತೈವಜುಗಳಿಗೆ ಪ್ರೆಸಿಡೆಂಟರು, ಸೆಕ್ರೆಟರಿಯವರು ಮತ್ತು ಮೂರು ಮಂದಿ ಇತರ ಪಂಚಾಯಿತರು ರುಜು ಮಾಡಬೇಕು.

32. ಪಂಚಾಯಿತರ ಪೈಕಿ ಯಾರಾದರೂ ಸಾಲಕ್ಕೆ ದರಖಾಸ್ತು ಕೊಟ್ಟರೆ ಆ ಬಗ್ಗೆ ನಡೆಯುವ ಮೀಟಿಂಗಿನಲ್ಲಿ ದರಖಾಸ್ತು ಕೊಟ್ಟ ಮೆಂಬರು ಸಮ್ಮತಿಯನ್ನು (ಓಟನ್ನು) ಕೊಡಕೂಡದು.

33. ಪಂಚಾಯಿತರ ಪೈಕಿ ಯಾರಾದರೂ ಸೊಸೈಟಿಯ ಗೌರವಕ್ಕೂ ಮತ್ತು ಅಭಿವೃದ್ಧಿಗೂ ಕುಂದಕ ಬರುವಂತೆ ನಡೆದರೆ ಅಂಥಾವರನ್ನು ರಿಜಿಸ್ಟ್ರಾರವರು ವಿಚಾರಣೆ ಮಾಡಿ ಬೇರೆ ಮೆಂಬರನ್ನು ಭರ್ತಿ ಮಾಡುವಂತೆ ಏರ್ಪಾಡು ಮಾಡಬಹುದು.

34. ಪಂಚಾಯಿತರ ಮೀಟಿಂಗಿನ ಎಲ್ಲಾ ಸಂಗತಿಗಳನ್ನೂ ಅದಕ್ಕಾಗಿ ಇಟ್ಟಿರುವ ಪುಸ್ತಕದಲ್ಲಿ ದಾಖಲ್ ಮಾಡತಕ್ಕದ್ದು. ಪ್ರೆಸಿಡೆಂಟ್ (ಯಜಮಾನ) ಅಥವಾ ಅವರ ಪ್ರತಿನಿಧಿ ಮತ್ತು ಸೆಕ್ರೆಟರಿ ಈ ನಡವಳಿಕೆಯನ್ನು ಮೀಟಿಂಗ್ ಆದ ಒಡನೆ ರುಜು ಮಾಡತಕ್ಕದ್ದು.

35. ಪಂಚಾಯಿತರು ತಾವು ಮಾಡುವ ಎಲ್ಲಾ ಕೆಲಸಗಳಿಗೂ ಸೊಸೈಟಿಯವರಿಗೆ ಜವಾಬ್ದಾರರಾಗಿರುತ್ತಾರೆ.

36. ಸೆಕ್ರೆಟರಿಯವರು ಮಾಡತಕ್ಕ ಕೆಲಸಗಳು ಯಾವುವೆಂದರೆ —
ಸೆಕ್ರೆಟರಿ.

(1) ಪಂಚಾಯಿತರ ಮತ್ತು ಸೊಸೈಟಿಯ ಮೀಟಿಂಗುಗಳಿಗೆ ಏರ್ಪಾಡು ಮಾಡುವುದು, ಸದರಿ ಮೀಟಿಂಗುಗಳಲ್ಲಿ ಹಾಜರಿರುವುದು. ಮತ್ತು ನಡವಳಿಕೆಗಳನ್ನು ರಿಕಾರ್ಡ್ ಮಾಡುವುದು.

(2) ಸೊಸೈಟಿಯ ಕೆಲಸದ ವೇಳೆಯಲ್ಲಿ ಹಾಜರಿರುವುದು.

(3) ಸೊಸೈಟಿಯ ರಿಜಿಸ್ಟರುಗಳನ್ನು ಇಡುವುದು. ಸೊಸೈಟಿಯ ತರಫ್ ಕಾಗದ ಪತ್ರಗಳನ್ನು ನಡೆಸುವುದು, ವಾರ್ಷಿಕ ರಿಪೋರ್ಟನ್ನು ಮತ್ತು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಬೇಕಾದ ಮಾಹಿತಿ, ಲೆಕ್ಕಪತ್ರಗ

ಗಳನ್ನು ಮತ್ತು ಆದಾಯವೆಚ್ಚದ ಪಟ್ಟಿಯನ್ನು ತಯಾರಿಸುವುದು ಮತ್ತು ಸೊಸೈಟಿಯ ದಸ್ತೈವಜುಗಳು ಮತ್ತು ಪುಸ್ತಕಗಳ ಜವಾಬ್ದಾರಿ ವಹಿಸುವುದು,

(4) ಸಾಲಕ್ಕೋಸ್ಕರ ಬರತಕ್ಕ ದರಖಾಸ್ತುಗಳನ್ನು, ಡಿಪಾಜಿಟ್ಟುಗಳನ್ನು ವಾಪಸ್ ತೆಗೆದುಕೊಳ್ಳುವುದಕ್ಕಾಗಿ ಬರುವ ಅರ್ಜಿಗಳನ್ನೂ ಸಭಾ ಪಂಚಾಯಿತರ ಅಭಿಪ್ರಾಯಕ್ಕೆ ಒದಗಿಸುವುದು ಮತ್ತು ಸೊಸೈಟಿಯ ಜಮಾ ಖರ್ಚು ಬಾಬುಗಳಿಗೆ ಸರಿಯಾದ ರಶೀತಿ ವಗೈರೆ ದಾಖಲೆಗಳನ್ನಿಡುವುದು

(5) ಪಂಚಾಯಿತರ ಅಭಿಪ್ರಾಯಕ್ಕನುಸಾರವಾಗಿ ಸೊಸೈಟಿಯ ಜಮಾಖರ್ಚು ಮೊದಲಾದ ಎಲ್ಲಾ ಕಾರ್ಯವನ್ನೂ ನಡೆಸುವುದು ಮತ್ತು ಲೆಕ್ಕ ಪತ್ರಗಳನ್ನಿಡುವುದು.

ಜನರಲ್ ಮೀಟಿಂಗ್

37 ಸೊಸೈಟಿಯ ಎಲ್ಲಾ ಆಸಾಮಿಗಳು ಜನರಲ್ ಮೀಟಿಂಗಿನಲ್ಲಿ ಸೇರುವ ಮೆಂಬರುಗಳ ತಾಬೆಗೆ ಒಳಪಟ್ಟಿರತಕ್ಕದ್ದು

38. ಪಂಚಾಯಿತರಿಗೆ ಅವಶ್ಯಕ ಕಂಡುಬಂದಾಗ ಜನರಲ್ ಮೀಟಿಂಗನ್ನು ಕರೆಯಬಹುದು. ವರುಷಕ್ಕೆ ಕನಿಷ್ಟ ಪಕ್ಷ ಒಂದಾವರ್ತಿಯಾದರೂ ಜೂನ್ ಆಖೈರಾದ ನಂತರ ಸದರಿ ಮೀಟಿಂಗು ಸೇರಬೇಕು ಆಗ ನಡೆಯುವ ಮೀಟಿಂಗು ಸಾಲಿಯಾನ್ ಮೀಟಿಂಗೆಂದು ಭಾವಿಸಲ್ಪಡತಕ್ಕದ್ದು ಸೊಸೈಟಿಯ ಮೆಂಬರುಗಳಾದ ಹತ್ತು ಅಥವಾ ಹೆಚ್ಚು ಜನಗಳು ಬರಹ ಮೂಲಕ ಕೇಳಿಕೊಂಡಾಗಲೂ ಮತ್ತು ರಿಜಿಸ್ಟ್ರಾರವರು ಅಪೇಕ್ಷಿಸಿದಾಗಲೂ ಜನರಲ್ ಮೀಟಿಂಗನ್ನು ನಡಿಸಬೇಕು ಮೆಂಬರುಗಳು ಅಪೇಕ್ಷಿಸಿದಲ್ಲಿ ಮೀಟಿಂಗಿನ ಉದ್ದೇಶವನ್ನು ಮೆಂಬರುಗಳು ಬರಹ ಮೂಲಕ ಸೆಕ್ರೆಟರಿಯವರಿಗೆ ತಿಳುಹಿಸಬೇಕು

39 ಸೊಸೈಟಿಯ ಎಲ್ಲಾ ಮೆಂಬರುಗಳಿಗೂ ಮೀಟಿಂಗಿಗೆ ಏಳು ದಿನಕ್ಕೆ ಮುಂಚೆ ಮೀಟಿಂಗಿನ ಉದ್ದೇಶ, ಚರ್ಚಿಸಬೇಕಾದ ವಿಷಯ—ಇವುಗಳನ್ನು ಸಮೂದಿಸಿ ನೋಟೀಸು ಮೂಲಕ ತಿಳಿಯಪಡಿಸಬೇಕು. ಈ ಕ್ಲಾಜು ರಿಜಿಸ್ಟ್ರಾರವರು ಕರೆಯುವ ಮೀಟಿಂಗಿಗೆ ಅನ್ವಯಿಸುವುದಿಲ್ಲ

40 ಮೀಟಿಂಗಿನಲ್ಲಿ ಚರ್ಚಿಸಲ್ಪಡುವ ಪ್ರತಿ ವಿಷಯದಲ್ಲಿಯೂ ಒಬ್ಬ ಮೆಂಬರಿಗೆ ಒಂದು ಸಮ್ಮತಿ (ಓಟು) ಇರತಕ್ಕದ್ದು. ರೂಲ್ಸ್ ಅಥವಾ ಬೈಲಾಗಳನ್ನನುಸರಿಸಿ ಸಮ್ಮತಿಗಳ ಹೆಚ್ಚು ಸಂಖ್ಯೆ ಮೇರೆಗೆ ವಿಷಯಗಳು ನಿರ್ಧರಿಸಲ್ಪಡಬೇಕು. ಪ್ರತಿನಿಧಿಯಿಂದ ಓಟು ಕೊಡಲಾಗದು.

41 ಸಾಲ್ ಆನ್ಯುಯಲ್ ಜನರಲ್ ಮೀಟಿಂಗಿನಲ್ಲಿ ಕೆಳಗೆ ನಮೂದಿಸಿರುವ ಕೆಲಸಗಳು ನಡೆಯಬೇಕು

(1) ಪಂಚಾಯತರು ತಯಾರಿಸಿ ಒಪ್ಪಿಸಿದ (i) ವಾರ್ಷಿಕ ರಿಪೋರ್ಟು (ii) ಬ್ಯಾಲೆನ್ಸ್ ಷೀಟು ಲಾಭ ಲೇವಾದೇವಿ ಪಟ್ಟಿ, (iii) ಜಮಾ ಖರ್ಚು ಲೆಕ್ಕ ಮತ್ತು (iv) ಲಾಭ ನಷ್ಟದ ಪಟ್ಟಿ — ಇವುಗಳ ವಿಷಯದಲ್ಲಿ ಚರ್ಚಿಸಿ ಸೂಕ್ತ ತೋರಿದಷ್ಟು ಅಂಗೀಕರಿಸುವುದು.

(2) ಮುಂದಿನ ಸಾಲಿಗೆ ಪಂಚಾಯತರನ್ನು ಚುನಾಯಿಸುವುದು.

(3) ಹಿಂದಿನ ಸಾಲಿನಲ್ಲಿ ಮೆಂಬರುಗಳು ಪಡೆದ ಸಾಲಗಳಿಂದ ಅವರಿಗೆ ಯಾವ ವಿಧವಾಗಿ ಅನುಕೂಲವಾಯಿತೆಂಬುದನ್ನು ಚರ್ಚಿಸಿ, ಹೊರಗಿನಿಂದ ತರತಕ್ಕ ಸಾಲದ ಮೊತ್ತವಾಗಲಿ ಅಥವಾ ಡಿಪಾಜಿಟ್ ಮೊತ್ತವಾಗಲಿ ಮುಂದಿನ ಸಾಲಿನಲ್ಲಿ ಸೊಸೈಟಿಗೆ ಉಂಟಾಗಬಹುದಾದ ಜವಾಬ್ದಾರಿಯನ್ನು ಗೊತ್ತುಮಾಡುವುದು.

(4) ಸೊಸೈಟಿಯ ಲೆಕ್ಕಗಳನ್ನು ಆಗಿಂದಾಗ್ಗೆ ತನಿಖೆ ಮಾಡುವುದಕ್ಕಾಗಿ ಪಂಚಾಯತರಲ್ಲದೆ ಇರುವ ಮೆಂಬರುಗಳ ಪೈಕಿ ಇಬ್ಬರನ್ನು ಆಡಿಟರುಗಳನ್ನಾಗಿ ಜನರಲ್ ಮೀಟಿಂಗಿನಲ್ಲಿ ಚುನಾಯಿಸಬೇಕು. ಹೀಗೆ ಚುನಾಯಿಸಲ್ಪಟ್ಟವರು ಲೆಕ್ಕಗಳನ್ನು ಆಗಿಂದಾಗ್ಗೆ ತನಿಖೆ ಮಾಡಿದೊಡನೆಯೇ ಅವರ ರಿಪೋರ್ಟಿನ ಒಂದು ನಕಲನ್ನು ರಿಜಿಸ್ಟ್ರಾರವರಿಗೆ ಕಳುಹಿಸಬೇಕು, ಮತ್ತೊಂದನ್ನು ಪಂಚಾಯತರಿಗೆ ಕೊಡಬೇಕು.

(5) ಪ್ರಾವಿನ್ಷಿಯಲ್ ಬ್ಯಾಂಕಿಗೆ ಮತ್ತು ಫೆಡರಲ್ ಬ್ಯಾಂಕಿಂಗ್ ಯೂನಿಯನ್ನಿಗೆ ಸೊಸೈಟಿಯು ಮೆಂಬರಾಗಿದ್ದ ಪಕ್ಷದಲ್ಲಿ ಸೊಸೈಟಿಯ ಪರವಾಗಿ ತಮ್ಮಲ್ಲಿನ ಮೆಂಬರುಗಳ ಪೈಕಿ ಪ್ರತಿನಿಧಿಗಳನ್ನು ಚುನಾಯಿಸುವುದು.

42. ರಿಜಿಸ್ಟ್ರಾರ್‌ರವರ ಅನುಮತಿ ಪಡೆದು ಪಂಚಾಯಿತರು ಆಗಿಂದಾಗ್ಯೆ ಸೊಸೈಟಿಯ ಖರ್ಚುಗಳನ್ನು ಜನರಲ್ ಬಾಡಿಯವರು ತೀರ್ಮಾನಿಸಿರುವ ಮೊತ್ತದೊಳಗೆ ನಿರ್ಧರಿಸತಕ್ಕದು. ಇದರಲ್ಲಿ ಮನೆ ಬಾಡಿಗೆ, ಸಿಬ್ಬಂದಿ ಮತ್ತು ಕಂಟಿಂಜೆಂಟು ಛಾರ್ಜುಗಳು ಸೇರಿರತಕ್ಕದು.

ಖರ್ಚು

43. ಈ ಸೊಸೈಟಿಯಲ್ಲಿ ಬರುವ ಲಾಭವು ವರುಷಕ್ಕೊಂದಾವರ್ತಿ ಜೂನ್ ಆಖೈರ್‌ವರೆಗೆ ಲೆಕ್ಕವಾಗಿ ಮೆಂಬರುಗಳಿಗೆ ಬಟವಾಡೆ ಆಗುತ್ತದೆ. ಲಾಭವನ್ನು ಗೊತ್ತು ಮಾಡುವುದರಲ್ಲಿ ವಸೂಲಾದ ಮೊಬಲಗು ಮಾತ್ರ ಜಮಾ ಲೆಕ್ಕಕ್ಕೆ ಸೇರಿಸಿಕೊಳ್ಳಲ್ಪಡುವುದು. ವಸೂಲಾಗದೆ ಇರುವ ಮೊಬಲಗು ಲೆಕ್ಕಕ್ಕೆ ಜಮಾ ಆಗುವುದಿಲ್ಲ. ಕಾರ್ಯನಿರ್ವಾಹಕ್ಕಾಗಿ ತಗಲುವ ಖರ್ಚನ್ನು ಮತ್ತು ಡಿಪಾಜಿಟ್ಟುಗಳು ಇತರ ಸಾಲಗಾರರಿಗೂ ಕೊಡತಕ್ಕ ಬಡ್ಡಿಯನ್ನು ಮೊದಲು ಕಟಾಯಿಸತಕ್ಕದ್ದು. ಉಳಿದ ನಫೆ ಪೈಕಿ ಹೊರಗಿನಿಂದ ತಂದ ಸಾಲದ ಮೇಲಿನ ಮತ್ತು ಡಿಪಾಜಿಟ್ಟಿನ ಪೂರ ಲಾಭವನ್ನು ಮತ್ತು ಷೇರು ಮೊಬಲಗಿನಿಂದ ಬಂದ ಲಾಭದ ಪೈಕಿ ಶೇಕಡಾ 25 ಕ್ಕೆ ಕಮ್ಮಿ ಇಲ್ಲದಷ್ಟನ್ನು ರಿಜರ್ವ್ ಫಂಡಿಗೆ ಸೇರಿಸತಕ್ಕದ್ದು. ಇದು ಆಗಿ ಉಳಿದ ಮೊಬಲಗಿನಲ್ಲಿ ಶೇಕಡಾ 5 ಕ್ಕೆ ಕಮ್ಮಿ ಇಲ್ಲದಂತೆ ಅನ್ಯೋನ್ಯ ಸಹಾಯ ಸಂಘಗಳ ಅಭಿವೃದ್ಧಿಗೂ ತಮ್ಮ ತಾಲ್ಲೂಕಿನಲ್ಲಿ ಏರ್ಪಡಿಸಬಹುದಾದ ಯೂನಿಯನ್ ಖರ್ಚಿಗೂ, ನಡಿಸಬಹುದಾದ ಕಾನ್ಫರೆನ್ಸ್ ಖರ್ಚಿಗೂ ಮತ್ತು ಇತರ ತಮ್ಮ ಗ್ರಾಮಗಳ ಪುರೋಭಿವೃದ್ಧಿಯ ಖರ್ಚಿಗೂ ಒಂದು ಫಂಡಾಗಿ ಏರ್ಪಡಿಸತಕ್ಕದ್ದು. ಉಳಿದಿದ್ದರಲ್ಲಿ ವರುಷಕ್ಕೆ ಶೇಕಡಾ 6 ಕ್ಕೆ ಹೆಚ್ಚಿಲ್ಲದಂತೆ ವಸೂಲಾದ ಷೇರು ಮೊಬಲಗಿನಮೇಲೆ ನಫೆಯು ಹಂಚಲ್ಪಡತಕ್ಕದ್ದು. ಉಳಿದ ಮೊಬಲಗನ್ನು ರಿಜರ್ವ್ ಫಂಡಿಗಾಗಲಿ, ಡಿವಿಡೆಂಡ್ ಈಕ್ವಲೈಜೇಷನ್ ಫಂಡಿಗಾಗಲೀ ಇಡತಕ್ಕದ್ದು.

ನಫೆ.

44. ಪ್ರತಿ ಸಂವತ್ಸರದಲ್ಲಿಯೂ ರಿಜಿಸ್ಟ್ರಾರ್‌ರವರ ಅಪ್ಪಣೆ ಪಡೆದು ಕೋ-ಆಪರೇಟಿವ್ ಮತ್ತು ಧರ್ಮದ ಫಂಡಿನ ಕೆಲವು ಮೊಬಲಗನ್ನು ಉಪಯೋಗಿಸಲು ಪಂಚಾಯಿತರಿಗೆ ಅಧಿಕಾರವಿರುತ್ತೆ.

ಕೋ-ಆಪರೇಟಿವ್ ಮತ್ತು ಧರ್ಮದ ಫಂಡು.

ರಿಜರ್ವ್ ಫಂಡು

45. ಸಭೆಯಲ್ಲಿ ಆಗಿಂದಾಗ್ಗೆ ಸೊಸೈಟಿಯವರು ಪ್ರತ್ಯೇಕವಾಗಿ ಇಡತಕ್ಕ ಆಪದ್ಧನವು ರಿಜರ್ವ್ ಫಂಡ್ ಎನಿಸುವುದು. ಈ ರಿಜರ್ವ್ ಫಂಡನ್ನು ಸರ್ಕಾರಿ ಅಥವಾ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಾಗಲೀ ಅಥವಾ ಸೊಸೈಟಿಯು ಮೆಂಬರಾಗಿ ಸೇರಿರುವ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕುಗಳಲ್ಲಾಗಲೀ ರಿಜಿಸ್ಟ್ರಾರವರ ಅನುಮತಿಯಂತೆ ಡಿಪಾಜಿಟ್ಟು ಮಾಡಬೇಕು.

46. ವಸೂಲಿಕ್ರಮ ಮುಂತಾದ್ದು ನಡೆಸಿ ಯಾವ ವಿಧದಿಂದಲೂ ವಸೂಲಿಗೆ ಶಕ್ಯವಿಲ್ಲದ ಸಾಲಗಳಿಂದ ಆ ಸಾಲಿನ ನಷ್ಟವು ಲಾಭಕ್ಕಿಂತ ಜಾಸ್ತಿಯಾದ್ದಲ್ಲಿ ರಿಜಿಸ್ಟ್ರಾರವರ ಅಪ್ಪಣೆ ಪಡೆದು ಅಂಥಾ ಲುಕ್ಸಾನನ್ನು ರಿಜರ್ವಿನಿಂದ ಸಂಘದ ಜವಾಬ್ದಾರಿಗೆ ಸಮನಾಗುವಷ್ಟು ಭರ್ತಿ ಮಾಡಿಕೊಳ್ಳಬಹುದು. ಆದರೆ ಯಾವ ಸಾಲವನ್ನೂ ಸರಿಯಾದ ತನಿಖೆ ಮತ್ತು ಸಂಪೂರ್ಣವಾದ ವಸೂಲಿಕ್ರಮ ಜರುಗಿಸದೆ ವಜಾ ಮಾಡಕೂಡದು.

47 ರಿಜರ್ವ್ ಫಂಡ್ ಮೊಬಲಗು ಮೆಂಬರುಗಳಲ್ಲಿ ಯಾವಾಗಲೂ ಭಾಗಿಸಲ್ಪಡುವುದಿಲ್ಲ. ಸೊಸೈಟಿ ವೈಂಡಪ್ ಆದರೆ ನ್ಯಾಯವಾದ ಎಲ್ಲಾ ಖರ್ಚನ್ನು ರಿಜರ್ವ್ ಫಂಡಿನಿಂದ ವಜಾ ಹಾಕಿ ಉಳಿದದ್ದು ಹೆಚ್ಚು ಮೆಂಬರುಗಳೂ ಮತ್ತು ರಿಜಿಸ್ಟ್ರಾರವರೂ ಒಪ್ಪಿದ ಧರ್ಮದ ಕೆಲಸಕ್ಕೆ ಉಪಯೋಗಿಸಲ್ಪಡುವುದು

ದಾವೆ, ವಿವಾದ ಮುಂತಾದ ವ್ಯಾಜ್ಯಗಳು.

48. ಈ ಸಂಘಕ್ಕೂ, ಇದರ ಮೆಂಬರುಗಳಿಗೂ, ಡಿಪಾಜಿಟ್ಟುದಾರರಿಗೂ, ಇತರ ಸಂಘಗಳಿಗೂ ಬೇರೆ ಜನಗಳು ಸೇರಿ ನಡೆಯುವ ಆಡಳಿತಗಳ ವಿಷಯವಾಗಿಯೂ, ಲೇವಾದೇವಿಗಳ ವಿಷಯವಾಗಿಯೂ ಉಂಟಾಗಬಹುದಾದ ದಾವೆ, ವಿವಾದ ಮುಂತಾದ ವ್ಯಾಜ್ಯಗಳು ರಿಜಿಸ್ಟ್ರಾರವರಲ್ಲಿ ದಾಖಲಾಗತಕ್ಕದ್ದು. ಅವರ ತೀರ್ಪುಗಳನ್ನು, ಡಿಕ್ರಿಗಳನ್ನು ಡೆಪ್ಯುಟಿ ಕಮಿಷನರುಗಳು ಕಂದಾಯದ ಬಾಕಿಯಂತೆ ಮೊಬಲಗು ವಸೂಲ್ಮಾಡಿ ಜಾರಿ ಮಾಡಬಹುದು. ಈ ದಾವೆ, ವಿವಾದ, ವ್ಯಾಜ್ಯ ಮತ್ತು ಅವುಗಳ ಅಪೀಲು ವಿಷಯಗಳಲ್ಲಿ ಸಿವಿಲ್ ಕೋರ್ಟುಗಳಿಗೆ ವಿಚಾರಿಸುವ ಮತ್ತು ತೀರ್ಮಾನ ಮಾಡುವ ಅಧಿಕಾರವಿರುವುದಿಲ್ಲ

ಸೆಂಟ್ರಲ್ ಬ್ಯಾಂಕ್

49 ರಿಜಿಸ್ಟ್ರಾರವರ ಅಪ್ಪಣೆ ಪಡೆದು ಈ ಸೊಸೈಟಿಯು ಸೆಂಟ್ರಲ್ ಪ್ರಾವಿನ್ಷಿಯಲ್ ಮತ್ತು ಫೆಡರಲ್ ಕೋ-ಆಪರೇಟಿವ್ ಬ್ಯಾಂಕುಗಳಲ್ಲಿ ಒಂದರಿಂದು ಷೇರನ್ನಾದರೂ ಪಡೆಯಬೇಕು.

ಲೆಕ್ಕ ಪತ್ರಗಳು.

50. ರಿಜಿಸ್ಟ್ರಾರವರು ವಿಧಿಸುವ ನಮೂನೆಗಳಲ್ಲಿ ಸೊಸೈಟಿಯು ಲೆಕ್ಕಗಳನ್ನು ಇಡತಕ್ಕದ್ದು. ಪಂಚಾಯಿತರ ಮತ್ತು ಜನರಲ್ ಮೀಟಿಂಗ್ ನಡವಳಿಕೆಗಳ ಕಾಪಿಗಳನ್ನು ಮತ್ತು ರಿಜಿಸ್ಟ್ರಾರವರು ಅಪೇಕ್ಷಿಸುವ ಮಾಹೆವಾರಿ ವಗೈರೆ ಲೆಕ್ಕಗಳ ಕಾಪಿಗಳನ್ನು ಅವರು ವಿಧಿಸುವ ಕಾಲಕ್ಕೆ ಸರಿಯಾಗಿ ಕಳುಹಿಸುತ್ತಾ ಬರಬೇಕು.

ಬೈಲಾ ಬದಲಾವಣೆ.

51 ಮೇಲ್ಕಂಡ ಬೈಲಾಗಳು 1918 ನೆ ಇಸವಿ VII ನೇ ನಂಬರ್ ಕೋ-ಆಪರೇಟಿವ್ ಸೊಸೈಟಿಗಳ ಕಾನೂನು ಮತ್ತು ಕೋ-ಆಪರೇಟಿವ್ ರೂಲ್ಸಿಗೆ ಅನುಸಾರವಾಗಿ ಮಾಡಲ್ಪಟ್ಟಿರುತ್ತವೆ. ಕಾಲಕ್ರಮೇಣ ಈ ಬೈಲಾಗಳಲ್ಲಿ ಬದಲಾವಣೆಗಳು ಮಾಡಲು ಯುಕ್ತ ತೋರಿದಲ್ಲಿ ಮೇಲ್ಕಂಡ ಕಾನೂನಿಗೂ ಮತ್ತು ರೂಲ್ಸಿಗೂ ವಿರೋಧವಿಲ್ಲದಂತೆ ರಿಜಿಸ್ಟ್ರಾರವರ ಅನುಮತಿ ಪಡೆದು ಬದಲಾವಣೆ ಮಾಡತಕ್ಕದ್ದು.

Approved.

(*Sd*) P A. KRISHNASWAMI IYER,
Assistant Registrar of
Co-operative Societies
Shimoga Division

SHIMOGA
2—11—1924.

Annex 24

Proceedings of the General meeting held on 2nd September 1925

[illegible]

THE [illegible] PRESS.
[illegible]
SHIMOGA.

17

Chandrashekhar (?) [handwritten, Kannada]

Signed by all persons

Approved and Registered

Signed / R. Ramachandra Rao
Asst. Registrar of Co-operative Societies,
Shimoga Division.

" Copy "

Asst. Registrar of Co-operative Societies,
Shimoga Division.

ML 293-27-28

Tel Address – Deputy CHITALDRUG.

In reply, please refer to No. L.A.S.L.C.274/27-28.
Enclosures.

OFFICE OF THE DEPUTY COMMISSIONER, CHITALDRUG DISTRICT

Dated, Chitaldrug 14th March 1929

4199
18 MAR 1929
L. S. G. BRANCH

From

C S KUPPUSWAMIENGAR, Esq.,
Deputy Commissioner,
Chitaldrug District.

To

R. Ranga Rao Esquire B.A.,B.L.,
General Secretary to Government,
Bangalore.

Sir,

With reference to your letter No.L.5488-5503 dated 12th March 1928 and D.O.No.L.5993-6000 dated 12th March 1929 requesting me to submit suitable proposals re the resolution moved by Mr. M. Venkatakrishniah in the Legislative Council pointing out the necessity for housing the working classes in Cities, Towns and villages, I have the honor to state that all the minor municipal councils in this District who were consulted in the matter are of opinion that the scheme need not be tried in their municipalities as there are not many labourers and as there are no industrial concerns in their towns. The President of Davangere Municipal council reports that the municipal council have resolved that 50 small houses at a cost of Rs 10000 might be constructed and disposed of to such of them as wish to purchase them, the value thereof being recovered in easy instalments and that in other cases the buildings might be let out for small rent. He has also reported that the scheme would be worked out after obtaining plans and estimates from the Municipal Engineer.

The President of the Chitaldrug Municipal council has reported that a site has been selected for the purpose and that necessary action would be taken as soon as the project is prepared It is reported by the President of Harihar Municipal council that only sites can be granted to the working classes and that the municipality cannot undertake the building of houses for want of funds.

In view of the fact that the financial condition of the municipal councils is as a rule not very satisfactory, I beg to propose that the working of the scheme might be taken up by Government in important towns where there are Industrial concerns and a large

number of labourers and suitable buildings put up at Government cost to satisfy the requirements of the labouring classes, recovering a portion of the cost from the local municipalities wherever feasible. The buildings constructed might be sold to the intending purchasers on easy terms or let out for small rent.

As regards the model bye-laws of building cooperative societies, I may state that there are no such societies working in this District.

In regard to your enquiry as to the money advanced for the improvement of flooded towns in the District, I beg to state that a sum of Rs 6000 was advanced to Harihar municipality in Government order No.L.4014-6/R.M.3-24-178 dated 11th January 1925. Out of this, it is reported that a sum of Rs 4450 has been granted to the sufferers as loans repayable in six equal instalments The municipal council has repaid a sum of Rs 3000 to Government and has recovered from the sufferers a sum of Rs 1433-6-0 so far. It is also reported that 50 building sites were given free to the sufferers by the municipality.

I have the honor to be,
S I R,
Your most obedient servant,

For Deputy Commissioner,
Chitaldrug District.
(Absent from Head quarters)